ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

11 ಸೆಪ್ಟೆಂಬರ್, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -180 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಚೀನಾದಲ್ಲಿ ನಡೆಯುತ್ತಿರುವ ಮಹಿಳೆಯರ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಭಾರತ, ಪಾಕಿಸ್ತಾನ ತಂಡವನ್ನು ಗುರುವಾರ 19-0 ಗೋಲುಗಳಿಂದ ಸೋಲಿಸಿ ಸೆಮಿಫೈನಲ್‌ಗೆ ಮುನ್ನುಗ್ಗಿತು.


ಅಮೇರಿಕಾ ಅಮೇರಿಕಾ-2 ಈ ವಾರ ರಿಲೀಸ್ » 2


ಮುಂಬೈ-ಗೋವಾ ಹೆದ್ದಾರಿ ಉದ್ಘಾಟನೆಗೆ ಬರಲ್ಲ 3


ದಕ್ಷಿಣ ಭಾರತದಲ್ಲೂ ಪ್ರಕೃತಿ ವಿಕೋಪದ ಲಕ್ಷಣ : ಕೋಡಿ ಶ್ರೀ » 4

# ಬಲಿಷ್ಠ ಕರ್ನಾಟಕಕ್ಕೆ ನವ ಸಂಕಲ್ಪ: ಡಿ.ಕೆ.ಶಿ.

## ಪರಿಶಿಷ್ಟರಿಗೆ ಉಚಿತ ಮನೆ, ನಿವೇಶನ | ಶತದಿನದ ಸಮಾರಂಭದಲ್ಲಿ ಸಿಎಂ ಹಲವು ಘೋಷಣೆ

• ಪ್ರಜೋದಯ ವರದಿ

**ಬೆಂಗಳೂರು:** ಆರೋಗ್ಯ, ಶಿಕ್ಷಣ, ಜಲ ಭದ್ರತೆ, ಪ್ರಾದೇಶಿಕ ಸಮತೋಲನ, ಸಾಮಾಜಿಕ ನ್ಯಾಯ, ಬಂಡವಾಳ ಹೂಡಿಕೆ, ಉದ್ಯೋಗದೊಂದಿಗೆ ಬಲಿಷ್ಠ ಕರ್ನಾಟಕ ನಿರ್ಮಾಣಕ್ಕೆ ನವ ಸಂಕಲ್ಪ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು 100 ದಿನಗಳು ಪೂರ್ಣಗೊಂಡ ಹಿನ್ನಲೆ ಗುರುವಾರ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ದೃಢ ಕರ್ನಾಟಕದ ಸಂಕಲ್ಪ, ಶತಕದ ಪಥ, ಪ್ರಗತಿಯ ರಥ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ಹಾಗು ಸಿದ್ದರಾಮಯ್ಯ ಅವರು ನಿಮಗೆ ಕೊಟ್ಟ ಭರವಸೆ ಈಡೇರಿಸಿ, ಬಸವಣ್ಣನವರ ತತ್ವದಂತೆ ನುಡಿದಂತೆ ನಡೆದಿದ್ದೇವೆ. ದೇಶವೇ ಮೆಚ್ಚುವಂತೆ ಆಡಳಿತ ನೀಡಿದ್ದೇವೆ. ಈ ರಥವನ್ನು ನಾನು ಒಬ್ಬನೇ ಎಳೆಯುತ್ತಿಲ್ಲ. ನಾಡಿನ 7 ಕೋಟಿ ಜನರ ಸರ್ಕಾರ. ಶತಕದ ಪಥದಲ್ಲಿ ಕರ್ನಾಟಕ ಹೆಜ್ಜೆ ಹಾಕುತ್ತಿದ್ದು, ನಾಡಿನ ಅಭಿವೃದ್ಧಿಗೆ ನಾವು ಬದ್ಧರಾಗಿದ್ದೇವೆಂದು ಹೇಳಿದರು.

ಎಲ್ಲಾ 224 ಶಾಸಕರು, 75 ಪರಿಷತ್ ಸದಸ್ಯರು, 28 ಲೋಕಸಭೆ ಸದಸ್ಯರು ಹಾಗು 12 ರಾಜ್ಯಸಭೆ ಸದಸ್ಯರು ಒಟ್ಟಾಗಿ ರಾಜ್ಯದ ಪ್ರಗತಿಗೆ ದುಡಿಯಲು ಈ ಸರ್ಕಾರ ಕೆಲಸ ಮಾಡಲಿದೆ. ಯಾರು ಸಹಕಾರ ನೀಡಲಿ ಬಿಡಲಿ, ನಾವು ಸಂವಿಧಾನ ಬದ್ಧವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತೇಂದು ಮಾತು ನೀಡುತ್ತೇನೆ. ರಾಗ, ದ್ವೇಷ, ಅಸೂಯೆ ಇಟ್ಟುಕೊಳ್ಳದೆ, ಸರ್ವರಿಗೂ ಸಮಪಾಲು, ಸಮಬಾಳು ಎಂದು ಕರ್ನಾಟಕದ ಪ್ರಗತಿಯ ರಥವನ್ನು ಮುನ್ನಡೆಸಲು ನಾನು ನಿಮ್ಮ ಮುಂದೆ ನಿಂತಿರುವೆ ಎಂದು ತಿಳಿಸಿದರು.

ಗ್ರಾಮೀಣ ಭಾಗದಲ್ಲಿರುವ ಮನೆರಹಿತ ಪರಿಶಿಷ್ಟ ಜಾತಿ ಹಾಗು ಪಂಗಡದವರಿಗೆ ಉಚಿತ ಮನೆ ಮತ್ತು ನಿವೇಶನ ನೀಡಲು ಸರ್ಕಾರ ತೀರ್ಮಾನಿಸಿದೆ. ಗ್ರಾಮೀಣ ಭಾಗದಲ್ಲಿ ನಿವೇಶನ ರಹಿತ ಕುಟುಂಬಗಳಿಗೆ 5 ಲಕ್ಷ ನಿವೇಶನಗಳ ವಿತರಣೆ, ಪರಿಶಿಷ್ಟರ ವಸತಿ ಪ್ರದೇಶಗಳಲ್ಲಿ ರಸ್ತೆ, ಚರಂಡಿ ಹಾಗು ಬೀದಿ ದೀಪಗಳನ್ನು ಮೇಲ್ದರ್ಜೆಗೆ ಏರಿಸುವುದು, ಎರಡು ವರ್ಷಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯದ 50 ಸಾವಿರ ಯುವಕರಿಗೆ ಸ್ವಯಂ ಉದ್ಯೋಗ ಕಲ್ಪಿಸುವುದು, ಅಲ್ಪಸಂಖ್ಯಾತ ಸಮುದಾಯದ ಯುವಕರಿಗೆ ಉದ್ಯಮಶೀಲತೆ ಮತ್ತು ಕೌಶಲವೃದ್ಧಿಗೆ ತರಬೇತಿ ಕೇಂದ್ರಗಳ ಸ್ಥಾಪಿಸಲಾಗುವುದೆಂದು ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.



"ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದ 100 ದಿನಗಳ ಪೂರೈಸಿದ ಈ ಸಂದರ್ಭವನ್ನು ಸಂಭ್ರಮಾಚರಣೆಯಾಗಿ ನೋಡದೆ, ಜನರಿಗೆ ನೀಡಿದ ಭರವಸೆಗಳನ್ನು ಸರ್ಕಾರ ಈಡೇರಿಸುತ್ತಿದೆಯೇ ಎಂದು ಪರಿಶೀಲಿಸುವ ಅವಕಾಶವಾಗಿ ಪರಿಗಣಿಸಬೇಕು. ನಾವು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದೇವೆಯೇ ಎಂಬುದನ್ನು ಅವಲೋಕಿಸಿಕೊಳ್ಳಲು ಇದೊಂದು ಅವಕಾಶ ಮತ್ತು ಜವಾಬ್ದಾರಿ.

-ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ

### ನೂರು ದಿನಗಳ ಹೆಜ್ಜೆ ಗುರುತು ಮೆಲುಕು

ನಾನು ಮುಖ್ಯಮಂತ್ರಿಯಾಗಿ ಜವಾಬ್ದಾರಿ ವಹಿಸಿಕೊಂಡ ಮೊದಲ ದಿನವೇ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ, ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, 10 ಸಾವಿರ ಭಾರತ ಜೋಡೋ ಯುವ ಸಂಘಗಳ ಘೋಷಣೆ, 2,400 ಚ.ಅಡಿಗಳಷ್ಟು ವಸತಿ ಕಟ್ಟಡಗಳಿಗೆ ಒಸಿ, ಸಿಸಿ ವಿನಾಯಿತಿ, ಬಿ ಖಾತಾಯಿಂದ ಎ ಖಾತಾ ಪರಿವರ್ತನೆ ರಾಜ್ಯದಾದ್ಯಂತ ವಿಸ್ತರಣೆ, ಖಾಲಿ ಇರುವ 72 ಸಾವಿರ ಸರ್ಕಾರಿ ಹುದ್ದೆಗಳ ಭರ್ತಿಗೆ ಚಾಲನೆ ನೀಡಿ, ರಾಜ್ಯದಲ್ಲಿ ರೌಡಿ ನಿಗ್ರಹ ದಳ ಸ್ಥಾಪಿಸಿ, ಗೂಂಡಾಗಿರಿ ಮಟ್ಟಹಾಕಲು ತೀರ್ಮಾನಿಸಲಾಗಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

## ಜಿ.ಬಿ.ಶಶಿಧರ್ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ

• ಪ್ರಜೋದಯ ವರದಿ



**ಅರಸೀಕೆರೆ:** ಭಾರೀ ಕುತೂಹಲ ಕೆರಳಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಮುಗಿದಿದ್ದು, ಅರಸೀಕೆರೆಯ ಜಿ.ಬಿ. ಶಶಿಧರ್ ಅವರಿಗೆ ಅವಕಾಶ ಒಲಿದು ಬಂದಿದೆ.

ಕೆಪಿಸಿಸಿ ಕಾರ್ಯದರ್ಶಿ, ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷರಾಗಿ ಪಕ್ಷ ಸಂಘಟನೆಗೆ ತಮ್ಮದೇಯಾದ ಕೊಡುಗೆ ನೀಡಿರುವ ಅವರು 2018ರಲ್ಲಿ ಅರಸೀಕೆರೆ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಜಿತರಾಗಿದ್ದರು. ದಿ.ಮಾಜಿ ಶಾಸಕ ಜಿ.ಎಸ್. ಬಸವರಾಜು ಅವರ ಹಿರಿಯ ಪುತ್ರರಾಗಿರುವ ಶಶಿಧರ್ ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿಯಾಗಿದ್ದಾರೆ.

ತಳ ಮಟ್ಟದಿಂದ ಪಕ್ಷ ಬಲ ವರ್ಧನೆಗೆ ಮುಂದಾಗಿದ್ದ ಹೈ ಕಮಾಂಡ್ ಜಿಲ್ಲಾಧ್ಯಕ್ಷರ ನೇಮಕಾತಿಯಲ್ಲಿ ಎಚ್ಚರಿಕೆಯ ಹೆಜ್ಜೆ ಇಟ್ಟಿತ್ತು. ಸಂಘಟನ್ ಸೃಜನ್ ಅಭಿಯಾನದ ಮೂಲಕ ವೀಕ್ಷಕರ ಮೂಲಕ ಜಿಲ್ಲಾಧ್ಯಕ್ಷ ಆಯ್ಕೆ ಪ್ರಕ್ರಿಯೆಗೆ ಅರ್ಜಿ ಆಹ್ವಾನಿಸಿತ್ತು. ಜಿಲ್ಲಾಧ್ಯಕ್ಷ ಹುದ್ದೆಗಾಗಿ 30ಕ್ಕೂ ಅಧಿಕ ಜನರು ಅರ್ಜಿ ಸಲ್ಲಿಸಿದ್ದರು. ಅಂತಿಮವಾಗಿ ಜಿ.ಬಿ.ಶಶಿಧರ್ ಅವರಿಗೆ ಅವಕಾಶ ದೊರೆತಿದ್ದು, ಮುಂಬರುವ ಚುನಾವಣೆಗಳಲ್ಲಿ ಪಕ್ಷದ ಗೆಲುವಿಗೆ ಹೇಗೆ ಕೆಲಸ ಮಾಡುತ್ತಾರೆಂಬ ನಿರೀಕ್ಷೆ ಹೆಚ್ಚಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಶಶಿಧರ್ ಅವರು, ಪಕ್ಷದ ಚೌಕಟ್ಟಿನಲ್ಲಿ ನನ್ನ ಸೇವೆ ಗುರುತಿಸಿ ರಾಜ್ಯ ನಾಯಕರು, ಹೈ ಕಮಾಂಡ್ ಜಿಲ್ಲಾಧ್ಯಕ್ಷ ಸ್ಥಾನ ನೀಡಿದ್ದು, ಹಿರಿಯ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕರ್ತರ ಒಡಗೂಡಿ ಪಕ್ಷ ಸಂಘಟನೆಗೆ ಶ್ರಮಿಸುವುದಾಗಿ ಭರವಸೆ ನೀಡಿದರು.

ಸ್ಥಳೀಯ ಸಂಸ್ಥೆ ಚುನಾವಣೆ ಸೇರಿ ತಾಲ್ಲೂಕು ಹಾಗು ಜಿಲ್ಲಾ ಪಂಚಾಯಿತಿ ಚುನಾವಣೆ ಬಳಿಕ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಶಕ್ತಿ ಮೀರಿ ಶ್ರಮಿಸುತ್ತೇನೆಂದರು.

## ಸೆ.11 ರಿಂದ 14ರವರೆಗೆ ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ



• ಪ್ರಜೋದಯ ವರದಿ

**ಹಾಸನ :** ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಸೆ.11 ರಿಂದ 14 ವರೆಗೆ ಜಿಲ್ಲೆಯಲ್ಲಿ ಪ್ರವಾಸ ಮಾಡಲಿದ್ದಾರೆ. ಸೆ.11 ರಂದು ಬೆಳಿಗ್ಗೆ 10 ಗಂಟೆಗೆ ನಗರಕ್ಕೆ ಆಗಮಿಸುವ ಸಚಿವರು ಜಿಲ್ಲಾ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ವಿ.ಬಿ.ಜಿ-ರಾಮ್ ಜಿ ಯೋಜನೆ ಸಂಬಂಧ ಅಧಿಕಾರಿಗಳೊಂದಿಗೆ ಸಭೆ ನಡೆಸುವರು.

ಅಂದು ಸಂಜೆ 4 ಗಂಟೆಗೆ ಜಿಲ್ಲಾ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದಂತೆ ಗಂಗೂರು ಗ್ರಾಮದ ರೈತರೊಂದಿಗೆ ಸಭೆ ನಡೆಸುವರು. ಸಂಜೆ 5 ಗಂಟೆಗೆ ಜಿಲ್ಲಾಧಿಕಾರಿ ನೂತನ ಕಚೇರಿ ಕಟ್ಟಡದ ಕಾಮಗಾರಿ ವೀಕ್ಷಣೆ, 6 ಗಂಟೆಗೆ ನಗರದ ಸರ್ಕಾರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಅಭಿವೃದ್ಧಿ ಕಾಮಗಾರಿಗಳ ವೀಕ್ಷಣೆ ಹಾಗೂ ಅಭಿವೃದ್ಧಿ ಕಾಮಗಾರಿಗಳ ಸಂಬಂಧ ಸಭೆ ನಡೆಸುವರು.

ಸೆ.12 ರಂದು ಬೆಳಿಗ್ಗೆ 10.30 ಕ್ಕೆ ಅರಸೀಕೆರೆ ಎಪಿಎಂಸಿ ತರಕಾರಿ ಮಾರುಕಟ್ಟೆ ಪಕ್ಕ ಗೀಜಿಹಳ್ಳಿಯಲ್ಲಿ ಕಾರ್ಮಿಕ ಇಲಾಖೆಯ ಕಟ್ಟಡ ಕಾರ್ಮಿಕರ ಮಕ್ಕಳ ಶ್ರಮಿಕ ವಸತಿ ಶಾಲೆ ಕಟ್ಟಡದ ಭೂಮಿ ಪೂಜೆ, 11 ಗಂಟೆಗೆ ಅರಸೀಕೆರೆ ನೂತನ ಉಪ ಕಾರಾಗೃಹದ ಪ್ರಾರಂಭೋತ್ಸವ, 11.30 ಕ್ಕೆ ಕೋಲ್ಡ್ ಸ್ಟೋರೇಜ್ ಘಟಕದ ಶಂಕು ಸ್ಥಾಪನೆ, 11.45 ಕ್ಕೆ ಆಯುಷ್ಮಾನ್ ಆರೋಗ್ಯ ಕೇಂದ್ರದ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ, ಮಧ್ಯಾಹ್ನ 12 ಗಂಟೆಗೆ ಹೋಬಳಿ ಮಟ್ಟದ ಪ್ರಜಾ ಸೇವೆ ಆಂದೋಲನದಲ್ಲಿ ಭಾಗವಹಿಸಿದ ನಂತರ ಹಾರನಹಳ್ಳಿ ಕೋಡಿಮಠ ಮಹಾ ಸಂಸ್ಥಾನಕ್ಕೆ ಭೇಟಿ ನೀಡಲಿದ್ದಾರೆ.

ಸೆ.13 ರಂದು ಬೆಳಿಗ್ಗೆ 10 ಗಂಟೆಗೆ ಅರಸೀಕೆರೆ ಮಾರುತಿ ನಗರದ ಗೃಹ ಕಚೇರಿಯಲ್ಲಿ ಸಾರ್ವಜನಿಕರ ಭೇಟಿ, 10.30ಕ್ಕೆ ಅರಸೀಕೆರೆ ಯಾದಾಪುರ ಜೇನುಕಲ್ ನಗರದ ಆದಿಜಾಂಬವ (ಸಿಂಧೂ) ಸಮುದಾಯ ಭವನದಲ್ಲಿ ನೂತನ ಸಚಿವರಿಗೆ ಏರ್ಪಡಿಸಿರುವ ಅಭಿನಂದನಾ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಭಾಗವಹಿಸಿ, ನಂತರ ಅರಸೀಕೆರೆಯಲ್ಲಿ ವಾಸ್ತವ್ಯ ಮಾಡಲಿದ್ದಾರೆ.

ಸೆ.14 ರಂದು ಬೆಳಿಗ್ಗೆ 10 ಗಂಟೆಗೆ ಅರಸೀಕೆರೆ ಸಚಿವರ ಗೃಹ ಕಚೇರಿಯಲ್ಲಿ ಸಾರ್ವಜನಿಕರ ಭೇಟಿ, 11.30ಕ್ಕೆ ಅರಸೀಕೆರೆ ಗಣಪತಿ ಪೆಂಡಾಲ್‌ನಲ್ಲಿ ಶ್ರೀ ಪ್ರಸನ್ನ ಗಣಪತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

# ಸಬ್‌ರಿಜಿಸ್ಟ್ರಾರ್ ವರ್ಗಾವಣೆ: ಆಸ್ತಿ ನೋಂದಣಿ ವಿಳಂಬ

## ಒಂದೇ ಲಾಗಿನ್‌ನಲ್ಲಿ ಕೆಲಸ | ಜನಸಾಮಾನ್ಯರಿಗೆ ದಿನವಿಡಿ ಕಾಯುವ ಸಂಕಟ

• ಪ್ರಜೋದಯ ವರದಿ



**ಹಾಸನ:** ನೋಂದಣಿ ಮತ್ತು ಮುದ್ರಾಂಕ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ನಗರದ ಹಿರಿಯ ಉಪ ನೋಂದಣಾಧಿಕಾರಿ ಆರ್. ರಾಮಪ್ರಸಾದ್ ಅವರನ್ನು ದಿಢೀರ್ ವರ್ಗಾವಣೆ ಮಾಡಿ, ಅವರ ಸ್ಥಾನಕ್ಕೆ ಮತ್ತೊಬ್ಬರನ್ನು ನೇಮಕ ಮಾಡದಿರುವುದರಿಂದ ಆಸ್ತಿ ನೋಂದಣಿ ಸೇರಿ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಬಹುತೇಕ ಕೆಲಸಗಳು ವಿಳಂಬವಾಗುತ್ತಿವೆ.

ನಗರದ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಈ ಹಿಂದೆ ಹಿರಿಯ ಉಪ ನೋಂದಣಾಧಿಕಾರಿ ಆರ್.ರಾಮಪ್ರಸಾದ್ ಹಾಗು ಉಪ ನೋಂದಣಾಧಿಕಾರಿ ಹನುಮನಗೌಡ ಅವರು ಕಾರ್ಯನಿರ್ವಹಿಸುತ್ತಿದ್ದರು. ಇಬ್ಬರು ಅಧಿಕಾರಿಗಳ ಪ್ರತ್ಯೇಕ ಲಾಗಿನ್‌ಗಳ ಮೂಲಕ ನೋಂದಣಿ ಪ್ರಕ್ರಿಯೆ ನಡೆಯುತ್ತಿದ್ದುದರಿಂದ ದಿನಕ್ಕೆ ಸರಾಸರಿ 80ರಿಂದ 100 ಆಸ್ತಿ ನೋಂದಣಿಗಳು ನಡೆಯುತ್ತಿದ್ದವು.

ಕಾವೇರಿ 2.0 ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ನೋಂದಣಿ ಪ್ರಕ್ರಿಯೆ ನಡೆಯುತ್ತಿರುವುದರಿಂದ ಅಗತ್ಯ ದಾಖಲೆಗಳು ಸರಿಯಾಗಿದ್ದಲ್ಲಿ 10 ರಿಂದ 15 ನಿಮಿಷದಲ್ಲೇ ಪ್ರಕ್ರಿಯೆ ಪೂರ್ಣಗೊಳ್ಳುತ್ತಿತ್ತು. ಹೀಗಾಗಿ ಹೆಚ್ಚಿನ ಸಂಖ್ಯೆಯ ಸಾರ್ವಜನಿಕರಿಗೆ ಒಂದೇ ದಿನದಲ್ಲಿ ಸೇವೆ ಒದಗಿಸಲು ಸಾಧ್ಯವಾಗುತ್ತಿತ್ತು.

ಆದರೆ, ಸೋಮವಾರ ರಾಜ್ಯದ ವಿವಿಧೆಡೆ ಕಾರ್ಯನಿರ್ವಹಿಸುತ್ತಿದ್ದ 10 ಮಂದಿ ಹಿರಿಯ ಉಪ ನೋಂದಣಾಧಿಕಾರಿಗಳು ಹಾಗು ಉಪ ನೋಂದಣಾಧಿಕಾರಿಗಳನ್ನು ಸರ್ಕಾರ ದಿಢೀರ್ ವರ್ಗಾವಣೆ ಮಾಡಿದೆ. ಈ ಪೈಕಿ ಹಾಸನ ನಗರದ ಹಿರಿಯ ಉಪ ನೋಂದಣಾಧಿಕಾರಿ ಆರ್.ರಾಮಪ್ರಸಾದ್ ಅವರನ್ನು ಬೆಂಗಳೂರಿನ ಹಲಸೂರಿಗೆ ವರ್ಗಾವಣೆ ಮಾಡಲಾಗಿದೆ. ಆದರೆ, ತೆರವಾದ ಹುದ್ದೆಗೆ ಇದುವರೆಗೆ ಮತ್ತೊಬ್ಬ ಅಧಿಕಾರಿಯನ್ನು ನಿಯೋಜಿಸಿಲ್ಲ.

**ಒಂದೇ ಲಾಗಿನ್‌ಗೆ ಹೆಚ್ಚಿದ ಹೊರೆ**

ಹಿರಿಯ ಉಪ ನೋಂದಣಾಧಿಕಾರಿ ವರ್ಗಾವಣೆಯಾದ ಬಳಿಕ ಕಚೇರಿಯಲ್ಲಿ ಪ್ರಸ್ತುತ ಉಪ ನೋಂದಣಾಧಿಕಾರಿ ಹನುಮನಗೌಡ ಅವರ ಒಂದೇ ಲಾಗಿನ್ ಮೂಲಕ ನೋಂದಣಿ ಪ್ರಕ್ರಿಯೆ ನಡೆಸಬೇಕಾಗಿದೆ. ಪರಿಣಾಮ ದಿನಕ್ಕೆ ನಡೆಯುತ್ತಿದ್ದ 80 ರಿಂದ 100 ನೋಂದಣಿಗಳ ಬದಲು 30 ರಿಂದ 40 ನೋಂದಣಿಗಳನ್ನು ನಡೆಸುವುದೇ ಕಷ್ಟವಾಗುತ್ತಿದೆ.

ಆಸ್ತಿ ನೋಂದಣಿ ಮಾತ್ರವಲ್ಲದೆ ವಿವಾಹ ನೋಂದಣಿ, ಕ್ರಯಪತ್ರ, ಕರಾರು, ಒಪ್ಪಂದ, ವಿಲ್ ಸೇರಿ ಹಲವು ಸೇವೆಗಳೂ ಉಪ ನೋಂದಣಾಧಿಕಾರಿಗಳ ಲಾಗಿನ್ ಮೂಲಕವೇ ನಡೆಯಬೇಕಿರುವುದರಿಂದ ಕೆಲಸದ ಒತ್ತಡ ಮತ್ತಷ್ಟು ಹೆಚ್ಚಾಗಿದೆ.

ಕೆಲವರು ಬೆಳಿಗ್ಗೆಯಿಂದ ಸಂಜೆಯವರೆಗೆ ಕಚೇರಿಯಲ್ಲಿ ಕಾದು ಕುಳಿತರೂ ಕೆಲಸವಾಗದೆ ವಾಪಾಸ್ ತೆರಳಿ ಮರುದಿನ ಮತ್ತೆ ಬರುವಂತಾಗಿದೆ. ದೂರದ ಊರುಗಳಿಂದ ಬರುವ ಸಾರ್ವಜನಿಕರು ಇದರಿಂದ ಹೆಚ್ಚು ತೊಂದರೆ ಅನುಭವಿಸುತ್ತಿದ್ದಾರೆ. ನೋಂದಣಿ ಕಾರ್ಯಕ್ಕೆ ರಜೆ ಮಾಡಿಕೊಂಡು ಬಂದವರಿಗೂ ಸಮಯ ಮತ್ತು ಹಣ ವ್ಯರ್ಥವಾಗುತ್ತಿದೆ ಎಂಬ ಅಸಮಾಧಾನ ವ್ಯಕ್ತವಾಗಿದೆ.

**ಅಧಿಕಾರಿಗಳ ಮೇಲೂ ಒತ್ತಡ**

ಒಬ್ಬ ಅಧಿಕಾರಿ ಹೆಚ್ಚುವರಿ ಹೊಣೆ ಹೊತ್ತು ಕಾರ್ಯನಿರ್ವಹಿಸಬೇಕಾಗಿರುವುದರಿಂದ ಕಚೇರಿಯಲ್ಲಿನ ಕೆಲಸದ ಒತ್ತಡವೂ ಹೆಚ್ಚಾಗಿದೆ. ಅಧಿಕಾರಿಗಳ ವರ್ಗಾವಣೆ ಸಾಮಾನ್ಯ ಆಡಳಿತಾತ್ಮಕ ಪ್ರಕ್ರಿಯೆಯಾಗಿದ್ದರೂ, ತೆರವಾಗುವ ಹುದ್ದೆಗೆ ಪರ್ಯಾಯ ವ್ಯವಸ್ಥೆ ಮಾಡದಿರುವುದರಿಂದ ಅದರ ನೇರ ಪರಿಣಾಮ ಸಾರ್ವಜನಿಕ ಸೇವೆಯ ಮೇಲೆ ಬೀಳುತ್ತಿದೆ.

ನೋಂದಣಿ ಕಚೇರಿಗೆ ಪ್ರತಿದಿನ ನೂರಾರು ಮಂದಿ ವಿವಿಧ ಕೆಲಸಗಳಿಗಾಗಿ ಆಗಮಿಸುತ್ತಾರೆ. ಹೀಗಾಗಿ ಖಾಲಿ ಹುದ್ದೆಯನ್ನು ತಕ್ಷಣ ಭರ್ತಿ ಮಾಡುವ ಮೂಲಕ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲ ತಪ್ಪಿಸಬೇಕೆಂಬ ಒತ್ತಾಯ ಕೇಳಿಬಂದಿದೆ.

"ಹಿಂದೆ ಇದ್ದ ಹಿರಿಯ ಉಪ ನೋಂದಣಾಧಿಕಾರಿ ಆರ್. ರಾಮಪ್ರಸಾದ್ ಅವರನ್ನು ವರ್ಗಾವಣೆ ಮಾಡಿರುವುದರಿಂದ ಸದ್ಯ ಒಂದೇ ಲಾಗಿನ್‌ನಿಂದ ಎಲ್ಲಾ ಕೆಲಸಗಳನ್ನು ಮಾಡಬೇಕಾಗಿದೆ. ಹೀಗಾಗಿ ನೋಂದಣಿ ಪ್ರಕ್ರಿಯೆಯಲ್ಲಿ ವಿಳಂಬವಾಗುತ್ತಿದೆ. ಸದ್ಯದಲ್ಲೇ ಹೊಸ ಅಧಿಕಾರಿ ಬರಲಿದ್ದು, ಬಳಿಕ ಸಮಸ್ಯೆ ಬಗೆಹರಿಯಲಿದೆ.

-ಹನುಮನಗೌಡ, ಉಪ ನೋಂದಣಾಧಿಕಾರಿ

### ಸ್ಲಾಟ್ ಬುಕ್ ಮಾಡಿದರೂ ಕಾಯುವಿಕೆ ತಪ್ಪಿಲ್ಲ

ನೋಂದಣಿ ಪ್ರಕ್ರಿಯೆ ಸಂಪೂರ್ಣವಾಗಿ ಆನ್‌ಲೈನ್ ಆಗಿರುವುದರಿಂದ ಸಾರ್ವಜನಿಕರು ಮುಂಚಿತವಾಗಿ ಸ್ಲಾಟ್ ಕಾಯ್ದಿರಿಸಿಕೊಂಡು ಕಚೇರಿಗೆ ಬರುತ್ತಿದ್ದಾರೆ. ಆದರೆ, ಒಂದೇ ಲಾಗಿನ್‌ನಿಂದ ಸೀಮಿತ ಸಂಖ್ಯೆಯಲ್ಲಿ ನೋಂದಣಿ ನಡೆಯುತ್ತಿರುವುದರಿಂದ ನಿಗದಿತ ಸಮಯಕ್ಕೆ ಕೆಲಸ ಪೂರ್ಣಗೊಳ್ಳದೆ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

## ದೇವೇಗೌಡರ ಹೋರಾಟದಿಂದ ಹೆದ್ದಾರಿ ಕಾಮಗಾರಿಗೆ ಅನುಮೋದನೆ

• ಪ್ರಜೋದಯ ವರದಿ



**ಹಾಸನ:** ರಾಷ್ಟ್ರೀಯ ಹೆದ್ದಾರಿ 373ರ ಬೇಲೂರು-ಹಾಸನ ಚತುಷ್ಪಥ ರಸ್ತೆ ಕಾಮಗಾರಿಯ ಪರಿಷ್ಕೃತ ಮೊತ್ತಕ್ಕೆ ಕೇಂದ್ರ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ನಿರಂತರ ಪ್ರಯತ್ನಕ್ಕೆ ಫಲ ಸಿಕ್ಕಿದೆ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ಯೋಜನೆಗೆ 470 ಕೋ.ರೂ. ದೊರೆತಿದ್ದು, ರಾಜ್ಯಸಭೆ ಸದಸ್ಯರಾಗಿದ್ದ ಅವಧಿಯಲ್ಲಿ ಕೇಂದ್ರ ಸರ್ಕಾರದೊಂದಿಗೆ ಅನೇಕ ಪತ್ರ ವ್ಯವಹಾರ, ಸಂಬಂಧಪಟ್ಟ ಸಚಿವರು ಹಾಗು ಅಧಿಕಾರಿಗಳನ್ನು ನಿರಂತರವಾಗಿ ಭೇಟಿ ಮಾಡುವ ಮೂಲಕ ಕಾಮಗಾರಿಗೆ ಅನುದಾನ ಕೊಡಿಸಿದ್ದಾರೆ. ಯೋಜನೆಗೆ ಸಂಬಂಧ ಪತ್ರ ವ್ಯವಹಾರಗಳು ಹಾಗು ಸರ್ಕಾರದ ದಾಖಲೆಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ ಎಂದರು.

ಪಂಚಾಯಿತಿ ಚುನಾವಣೆಗೆ ಸಂಬಂಧಿಸಿದ ಮೀಸಲಾತಿ ಪಟ್ಟಿಯಲ್ಲಿ ಬದಲಾವಣೆ ಮಾಡಿರುವ ಕ್ರಮದ ವಿರುದ್ಧ ಕಾನೂನು ಹೋರಾಟ ನಡೆಸಲು ಸಿದ್ಧತೆ ನಡೆಸಲಾಗಿದೆ. ಜಿಲ್ಲೆಯ ಪಂಚಾಯಿತಿ ಮೀಸಲಾತಿ ವಿಚಾರದಲ್ಲಿ ಈ ಹಿಂದೆ ಸಾಕಷ್ಟು ಹೋರಾಟ ನಡೆಸಲಾಗಿದೆ. ಈ ಸಂಬಂಧ ಚರ್ಚೆ ನಡೆಸುವುದರ ಜೊತೆಗೆ ಅಧಿಕಾರಿಗಳು ಹಾಗೂ ಸರ್ಕಾರಕ್ಕೆ ಪತ್ರಗಳ ಮೂಲಕ ಮನವಿ ಸಲ್ಲಿಸಲಾಗಿದೆ ಎಂದರು.

ಗ್ರಾಮ ಪಂಚಾಯಿತಿ ಮೀಸಲಾತಿಗೆ ಸಂಬಂಧಿಸಿ ಪ್ರತಿಕ್ರಿಯಿಸಿ, ಜಿಲ್ಲಾಧಿಕಾರಿ ಅವರು ಮೀಸಲಾತಿ ಬದಲಾಯಿಸಿರುವುದು ಖಂಡನೀಯ. ಒಂದು ಬಾರಿ ಅಧಿಕೃತವಾಗಿ ಪಟ್ಟಿ ಪ್ರಕಟಿಸಿದ ಬಳಿಕ ಅದರಲ್ಲಿ ಬದಲಾವಣೆ ಮಾಡಿರುವ ಕ್ರಮದಿಂದ ಹಲವು ಗೊಂದಲಗಳು ಉಂಟಾಗಿವೆ. ಈ ವಿಷಯಕ್ಕೆ ಸಂಬಂಧಿಸಿ ಅಗತ್ಯ ದಾಖಲೆ ಸಂಗ್ರಹಿಸಲಾಗುತ್ತಿದೆ. ಅನ್ಯಾಯದ ವಿರುದ್ಧ ಬಳಿಕ ನ್ಯಾಯಾಲಯದ ಮೊರೆ ಹೋಗುತ್ತೇವೆಂದರು.

## ಬೇಲೂರು ತಾಲ್ಲೂಕು ಬರಪೀಡಿತ ಪಟ್ಟಿಗೆ ಸೇರಿಸಲು ಆಗ್ರಹಿಸಿ ಪ್ರತಿಭಟನೆ



• ಪ್ರಜೋದಯ ವರದಿ

**ಬೇಲೂರು:** ಮಳೆ ಕೊರತೆಯಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ನೆರವಾಗಲು ಕೂಡಲೇ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕೆಂದು ಆಗ್ರಹಿಸಿ ಗುರುವಾರ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ರಸ್ತೆ ತಡೆ ನಡೆಸಿದ ಪ್ರತಿಭಟನಾಕಾರರು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ರೈತ ಸಂಘದ ತಾಲ್ಲೂಕು ಅಧ್ಯಕ್ಷ ಭೋಗಮಲ್ಲೇಶ್ ಅವರು ಮಾತನಾಡಿ, ಮುಂದಿನ ಏಳು ದಿನಗಳಲ್ಲಿ ಬರಪೀಡಿತ ತಾಲ್ಲೂಕು ಎಂದು ಘೋಷಿಸಿ ರೈತರಿಗೆ ಬೆಳೆ ಪರಿಹಾರ ನೀಡಬೇಕು. ಇಲ್ಲವಾ

» ನಾಲ್ಕನೇ ಪುಟದಲ್ಲಿ

## ಸಮರ್ಪಕ ಸಾರಿಗೆ ವ್ಯವಸ್ಥೆಗಾಗಿ ಬಸ್ ತಡೆದ ವಿದ್ಯಾರ್ಥಿಗಳು

• ಪ್ರಜೋದಯ ವರದಿ



**ಆಲೂರು:** ಗ್ರಾಮೀಣ ಭಾಗದಲ್ಲಿ ಸಮರ್ಪಕ ಸಾರಿಗೆ ವ್ಯವಸ್ಥೆ ಇಲ್ಲದೆ ಶಾಲಾ-ಕಾಲೇಜು ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿದ್ದು, ಹೆಚ್ಚುವರಿ ಬಸ್ ಕಲ್ಪಿಸಬೇಕೆಂದು ಆಗ್ರಹಿಸಿ ತಾಲ್ಲೂಕಿನ ಅಡಿಬೈಲು ಗ್ರಾಮದಲ್ಲಿ ಗುರುವಾರ ನೂರಕ್ಕೂ ಅಧಿಕ ವಿದ್ಯಾರ್ಥಿಗಳು ಬಸ್ ತಡೆದು ಪ್ರತಿಭಟನೆ ನಡೆಸಿದರು.

ನಲ್ಲೂರು-ಮಗ್ಗೆ ಮಾರ್ಗದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಿದೆ. ಅಡಿಬೈಲು, ಭರತೂರು, ಕಲ್ಲಾರೆ, ಕೊಡಗತ್ತೂರು ಸೇರಿ ಸುತ್ತಲಿನ ಇತರ ಹಳ್ಳಿಗಳಿಂದ 30ಕ್ಕೂ ಹೆಚ್ಚು ಮಕ್ಕಳು ಬಸ್ ಅವಲಂಬಿಸಿದ್ದಾರೆ. ಆದರೆ, ನಿಡುಗರಹಳ್ಳಿ, ಪಲ್ಲೂರು, ಪುರ, ಸಿಂಗಟಗೂರು ಪ್ರಯಾಣಿಕರೇ ಹತ್ತುವುದರಿಂದ ನಮಗೆ ಜಾಗವೇ ಇರುವುದಿಲ್ಲ. ಬೆಳಿಗ್ಗೆ 7 ಗಂಟೆಗೆ ವಳಲಹಳ್ಳಿ ಮಾರ್ಗದ ಬಸ್ ಇದ್ದರೂ ಅದಕ್ಕೆ ಹತ್ತದೇ ಈ ಬಸ್‌ಗಾಗಿ ಕಾಯುತ್ತಾರೆ. ಬೆಳಿಗ್ಗೆ ಸಮಯದಲ್ಲಿ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆಂದು ವಿದ್ಯಾರ್ಥಿಗಳು ಆಗ್ರಹಿಸಿದರು.

ಕಾಡಾನೆ ಪೀಡಿತ ಪ್ರದೇಶವಾದ್ದರಿಂದ ಕಾಲೇಜಿಗೆ ಹೋಗುವುದೇ

» ನಾಲ್ಕನೇ ಪುಟದಲ್ಲಿ

## ಸೆ.17ಕ್ಕೆ ಎ.ವಿ.ಕೆ. ಕಾಲೇಜಿನಲ್ಲಿ ವಿಚಾರ ಸಂಕಿರಣ

• ಪ್ರಜೋದಯ ವರದಿ

**ಹಾಸನ:** ನಗರದ ಎ.ವಿ.ಕಾಂತಮ್ಮ ಮಹಿಳಾ ಕಾಲೇಜಿನಲ್ಲಿ ಸೆ.17ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಕನ್ನಡ ಸಾಹಿತ್ಯದಲ್ಲಿ ಕಾಡು ವಿಷಯ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿದೆ.

ಸಾಹಿತ್ಯ ಅಕಾಡೆಮಿಯ ಪ್ರಾದೇಶಿಕ ಕಾರ್ಯದರ್ಶಿ ಷಣ್ಮುಖಾನಂದ ಸ್ವಾಗತ ನುಡಿ ಆಡಲಿದ್ದು, ಸಲಹಾ ಮಂಡಳಿ ಸದಸ್ಯ ವಿಜಯಕುಮಾರ ಕಟಗಿಹಳ್ಳಿ ಮಠ ಪ್ರಾಸ್ತಾವಿಕ ನುಡಿ ಆಡುವರು. ಎಂಟಿಇಎಸ್ ಅಧ್ಯಕ್ಷ ಬಿ.ಆರ್. ಗುರುದೇವ್ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಾಂಶು ಪಾಲೆ ಎನ್.ಎಸ್. ಶಶಿಕಲಾ ವಂದನಾರ್ಪಣೆ ನೆರವೇರಿಸ ಲಿದ್ದಾರೆ.

ಬೆಳಿಗ್ಗೆ 11.30ರ ನಂತರ ಮೊದಲ ಗೋಷ್ಠಿ ಆರಂಭವಾಗಲಿದೆ. ಗುರುಪಾದ ಮರಿಗುದ್ದಿ ಅವರು ಕುವೆಂಪು ಅವರ ಸಾಹಿತ್ಯದಲ್ಲಿ ಕಾಡು ವಿಷಯದ ಕುರಿತು ಪ್ರಬಂಧ ಮಂಡಿಸಲಿದ್ದು, ಮಧ್ಯಾಹ್ನ 2 ಗಂಟೆಗೆ 2ನೇ ಗೋಷ್ಠಿ ನಡೆಯಲಿದೆ. ಕನ್ನಡ ಸಾಹಿತ್ಯದಲ್ಲಿ ಕಾಡಿನ ಅನುಭವ ಹಾಗು ಪರಿಸರ ಪ್ರಜ್ಞೆಯನ್ನು ವಿಭಿನ್ನವಾಗಿ ಕಟ್ಟಿಕೊಟ್ಟ ಸಾಹಿತಿಗಳ ಕೃತಿಗಳ ಕುರಿತು ಚರ್ಚೆ ನಡೆಯಲಿದೆ.

## ಎರಡು ದಿನಕ್ಕೊಮ್ಮೆ ಹೇಮಾವತಿ | ನೀರು ಶಾಸಕ ಹೆಚ್.ಪಿ.ಸ್ವರೂಪ್ ಮಾಹಿತಿ

# ನಗರದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಸಾಧ್ಯತೆ

• ಪ್ರಜೋದಯ ವರದಿ



**ಹಾಸನ:** ಮಳೆ ಅಭಾವದಿಂದಾಗಿ ಗೊರೂರಿನ ಹೇಮಾವತಿ ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿದ್ದು, ನಗರಕ್ಕೆ ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ. ಮುನ್ನೆಚ್ಚರಿಕೆ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

ನಗರದ ಮಹಾರಾಜಾ ಪಾರ್ಕ್‌ನಲ್ಲಿ ಗುರುವಾರ ಸಾರ್ವಜನಿಕರ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಹಿನ್ನಲೆಯಲ್ಲಿ ಮುಂದಿನ ದಿನಗಳಲ್ಲಿ ನೀರಿಗೆ ಅಭಾವವಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು ಅನಿವಾರ್ಯ. ಈಗಾಗಲೇ ಕೆಲವು ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆ ಕಂಡು ಬರುತ್ತಿದೆ. ಮಹಾನಗರ ಪಾಲಿಕೆ ಆಯುಕ್ತರು, ಇಂಜಿನೀಯರ್ ಹಾಗು ಸಂಬಂಧಪಟ್ಟ ಅಧಿಕಾರಿ ಗಳೊಂದಿಗೆ ಚರ್ಚೆ ನಡೆಸಲಾಗಿದೆ. ಅಂತರ್ಜಲ ಮಟ್ಟ ಕುಸಿತದಿಂದ ಬೋರ್‌ವೆಲ್‌ಗಳು ನಿಷ್ಕ್ರಿಯವಾಗಿವೆ. ಹೀಗಾಗಿ ಹೇಮಾವತಿ ನದಿ ನೀರನ್ನು ಎಲ್ಲಾ ವಾರ್ಡ್‌ಗಳಿಗೆ ಪೂರೈಸಲು ಕ್ರಮ ಕೈಗೊಳ್ಳಬೇಕಿದೆ. ನಗರದ ಪ್ರತಿ ಪ್ರದೇಶಕ್ಕೂ ಪ್ರತಿದಿನ ಹೇಮಾವತಿ ನೀರು ಪೂರೈಸುವುದು ಸದ್ಯದ ಪರಿ ಸ್ಥಿತಿಯಲ್ಲಿ ಸಾಧ್ಯವಾಗದಿದ್ದರೂ, ಒಂದು ದಿನ ಬಿಟ್ಟು ಒಂದು ಪೂರೈಸುವ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಉಳಿದ ದಿನಗ ಳಲ್ಲಿ ಲಭ್ಯವಿರುವ ಕೊಳವೆ ಬಾವಿ ನೀರನ್ನು ಪೂರೈಸುವ ಮೂಲಕ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದೆಂದು ಭರವಸೆ ನೀಡಿದರು.

ನಗರ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ ಗ್ರಾಮಗಳಲ್ಲೂ ಕುಡಿಯುವ ನೀರು ಮತ್ತು ಸ್ವಚ್ಛತಾ ವ್ಯವಸ್ಥೆಗೆ ಆದ್ಯತೆ ನೀಡಲಾಗುತ್ತಿದೆ. ನಗರಪಾಲಿಕೆ ವ್ಯಾಪ್ತಿ ವಿಸ್ತರಣೆಯಾದ ಹಿನ್ನಲೆಯಲ್ಲಿ ಮೂಲಸೌಕರ್ಯಗಳ ಮೇಲಿನ ಒತ್ತಡವೂ ಹೆಚ್ಚಾಗಿದೆ. ಆದ್ದರಿಂದ ಸಾರ್ವಜನಿಕರು ನಗರಾಡಳಿತದೊಂದಿಗೆ ಸಹಕರಿಸಬೇಕೆಂದು ಮನವಿ ಮಾಡಿದರು.

ಹೊಸ ಗ್ರಾಮಗಳು ಸೇರ್ಪಡೆಯಾದ ಬಳಿಕ ಸ್ವಚ್ಛತಾ ಕಾರ್ಯಕ್ಕೆ ಹೆಚ್ಚಿನ ಪೌರಕಾರ್ಮಿಕರ ಅಗತ್ಯವಿದೆ. ಕೆಲವು ಸೇರ್ಪಡೆಗೊಂಡ ಪ್ರದೇಶಗಳಲ್ಲಿ ಸಮರ್ಪಕವಾಗಿ ಸ್ವಚ್ಛತಾ ಕಾರ್ಯ ನಡೆಯುತ್ತಿಲ್ಲವೆಂಬ ದೂರುಗಳು ಬಂದಿವೆ. ಈ ಹಿನ್ನಲೆಯಲ್ಲಿ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ 75 ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಆದಾಗ್ಯೂ, ನಗರದ ವ್ಯಾಪ್ತಿ ಹೆಚ್ಚಾಗಿರುವುದರಿಂದ ಪೌರಕಾರ್ಮಿಕರ ಅವಶ್ಯಕತೆ ಇದೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಾಗಿದ್ದು, ಅಧಿವೇಶನದಲ್ಲಿಯೂ ಹಾಸನ

» ನಾಲ್ಕನೇ ಪುಟದಲ್ಲಿ

## ಇಂದು ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ

• ಪ್ರಜೋದಯ ವರದಿ

**ಹಾಸನ :** ಅರಣ್ಯ ಸಂಪತ್ತು ಮತ್ತು ವನ್ಯಜೀವಿಗಳ ರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡಿದ ಅರಣ್ಯ ಇಲಾಖೆ ಸಿಬ್ಬಂದಿ ಬಲಿದಾನವನ್ನು ಸ್ಮರಣೆ ಮಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಸೆ.11 ರಂದು ಬೆಳಿಗ್ಗೆ 8 ಗಂಟೆಗೆ ಹಾಸನದ ಅರಣ್ಯ ಭವನದ ಆವರಣದಲ್ಲಿ ನಡೆಯಲಿದೆ.

ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಏಡುಕುಂಡಲು ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ಅವರು ಭಾಗವಹಿಸಲಿದ್ದಾರೆ. ವಿಶೇಷ ಅಹ್ವಾನಿತರಾಗಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ದಾಕ್ಷಾಯಿಣಿ ಜಿ.ಕೆ, ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಹನಕುಮಾರ ಟಿ.ಎಮ್., ಅರಣ್ಯ ಸಂಚಾರಿ ದಳದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾವ್ಯಶ್ರೀ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

E-mail : prajodayahsn@gmail.com

ಪ್ರಜೋದಯ

11 ಸೆಪ್ಟೆಂಬರ್ 2026 ಶುಕ್ರವಾರ

# ಸಿನಿ ಪ್ರಜಾ




# ಅಮೇರಿಕಾ ಅಮೇರಿಕಾ-2 ಈ ವಾರ ರಿಲೀಸ್

## ಇದು ಮುಂದುವರೆದ ಭಾಗ ಅಲ್ವಾ?

ಅಮೇರಿಕಾ ಅಮೇರಿಕಾ-2 ಸಿನಿಮಾ ನಿರೀಕ್ಷೆ ಹುಟ್ಟಿಸಿದೆ. ಟೈಟಲ್ ಇಲ್ಲಿ ಆ ಕೆಲಸ ಮಾಡಿದೆ. ಆದರೆ, ಇದು ಆ ಅಮೇರಿಕಾ ಅಮೇರಿಕಾ ಚಿತ್ರದ ಮುಂದುವರೆದ ಭಾಗ ಅಲ್ವೇ ಅಲ್ಲ ಅಂತ ನಾಗತಿಹಳ್ಳಿ ಮೇಷ್ಟ್ರು ಹೇಳಿದ್ದಾರೆ. ಅಂದ್ಹಾಗೆ ಈ ಚಿತ್ರ ಈ ವಾರ ರಿಲೀಸ್ ಆಗುತ್ತಿದೆ. ಇದರ ಇತರ ಮಾಹಿತಿ ಇಲ್ಲಿದೆ ಓದಿ.

**ಅಮೇರಿಕಾ ಅಮೇರಿಕಾ-2 ಈ ವಾರ ರಿಲೀಸ್**

ಅಮೇರಿಕಾ ಅಮೇರಿಕಾ ಚಿತ್ರ ಬಂದು ಹೆಚ್ಚು ಕಡಿಮೆ 30 ವರ್ಷ ಆಗ್ತಾ ಬಂತು. ಈ ಚಿತ್ರದ ಎರಡನೇ ಭಾಗ ಬರಬೇಕಿತ್ತು ಅಂದುಕೊಂಡವರೂ ಇದ್ದರು. ಆದರೆ, ಇದರ ನಡುವೆ ಡೈರೆಕ್ಟರ್ ನಾಗತಿಹಳ್ಳಿ ಚಂದ್ರಶೇಖರ್ ಅವರು ಒಂದು ಚಿತ್ರ ಶುರು ಮಾಡಿದರು. ಇದನ್ನೂ ದೂರದ ಅಮೇರಿಕಾದಲ್ಲಿ ಚಿತ್ರೀಕರಿಸಿದರು. ಒಬ್ಬ ನಾಯಕಿ ಮತ್ತು ಇಬ್ಬರು ನಾಯಕರನ್ನ ಸೆಲೆಕ್ಟ್ ಮಾಡಿದರು. ಆಗಲೇ ಬಹುತೇಕರು ಇದು ಅಮೇರಿಕಾ ಅಮೇರಿಕಾ-2 ಚಿತ್ರ ಅಂತ ಗೆಸ್ ಮಾಡ್ತಾನೇ ಇದ್ದರು. ಚಿತ್ರೀಕರಣ ಎಲ್ಲ ಮುಗಿಸಿದರೂ ಕೂಡ ನಾಗತಿಹಳ್ಳಿ ಮೇಷ್ಟ್ರು ತಮ್ಮ ಈ ಚಿತ್ರಕ್ಕೆ ಟೈಟಲ್ ಇಟ್ಟಿರಲಿಲ್ಲ. ಕೊನೆಗೆ ಒಂದು ಚೆಂದದ ಟೈಟಲ್ ಕೊಟ್ಟರು. ಅದುವೇ ಅಮೇರಿಕಾ ಅಮೇರಿಕಾ-2 ನೋಡಿ. ಆದರೆ....

**ಹೌದು...ಇದು ಆ ಚಿತ್ರ ಅಲ್ಲ..**

ಅಮೇರಿಕಾ ಅಮೇರಿಕಾ-2 ಅಂತ ಚಿತ್ರಕ್ಕೆ ಟೈಟಲ್ ಇಟ್ಟಿದ್ದಾರೆ. ಆದರೆ, ಕತೆ ಇದು ಅದಲ್ಲ ಬಿಡಿ. ಇಲ್ಲಿ ಮೂರು ಜನ ಇದ್ದಾರೆ. ಒಬ್ಬಳು ನಾಯಕಿ ಇದ್ದಾರೆ. ನಾಯಕರು ಒಬ್ಬರಲ್ಲ, ಇಬ್ಬರು ಇದ್ದಾರೆ.

**ಮೇಷ್ಟ್ರು ಬರೆದ ಕಥೆ**

ಆದರೂ ಇದು ಅಮೇರಿಕಾ ಅಮೇರಿಕಾ-2 ಚಿತ್ರ ಅಲ್ವೇ ಅಲ್ಲ. ಆದರೆ, ಮೇಷ್ಟ್ರ ಒಂದು ಮಾತು ಹೇಳ್ಬೇಕು ಅನಿಸುತ್ತದೆ. ಹಳೇ ಕಥೆಗಳಿಂದಲೇ ಹೊಸ ಕಥೆ ಹುಟ್ಟುತ್ತವೆ ಅಂತಲೆ ಇದೆ ನಾಗತಿಹಳ್ಳಿ ಮೇಷ್ಟ್ರು ಹೇಳಿದ್ದಾರೆ.

**ಇದು ಉಪಶೀರ್ಷಿಕೆನೂ ಹೌದು**

ಅಮೇರಿಕಾ ಅಮೇರಿಕಾ-2 ಚಿತ್ರಕ್ಕೆ ಒಂದು ಉಪ ಶೀರ್ಷಿಕೆ ಇದೆ. ಅದು ಬೇರೆ ಏನೋ ಅಲ್ಲ, ಹಳೇ ಕಥೆಗಳಿಂದಲೇ ಹೊಸ ಕಥೆ ಹುಟ್ಟುತ್ತವೆ ಅನ್ನುವುದೇ ಆಗಿದೆ.

ಅಮೇರಿಕಾ ಅಮೇರಿಕಾ-2 ಚಿತ್ರದಲ್ಲಿ ಪೃಥ್ವಿ ಅಂಬಾರ್ ಇದ್ದಾರೆ. ನಿರೂಪ್ ಭಂಡಾರಿ ನಟಿಸಿದ್ದಾರೆ. ಶಾನ್ವಿ ಶ್ರೀವಾಸ್ತವ್ ಅಭಿನಯಿಸಿದ್ದಾರೆ. ಇಲ್ಲಿ ಹುಡುಗಿನೇ ಇಬ್ಬರಿಗೂ ಪ್ರಪೋಸ್ ಮಾಡುವಂತೆ ಇದೆ. ಸದ್ಯ ಬಿಟ್ಟಿರೋ ವಿಡಿಯೋಗಳನ್ನ ನೋಡಿದರೆ ಆ ಒಂದು ಅಭಿಪ್ರಾಯ ಬರುತ್ತದೆ.

**ಸೆಪ್ಟೆಂಬರ್-11 ರಿಲೀಸ್**

ಅಮೇರಿಕಾ ಅಮೇರಿಕಾ-2 ಚಿತ್ರ ರೆಡಿ ಆಗಿದೆ. ಪ್ರಚಾರವು ಶುರು ಆಗಿದೆ. ಟ್ರೈಲರ್ ಹಾಗೂ ಹಾಡುಗಳು ರಿಲೀಸ್ ಆಗಿವೆ. ಮನೋ ಮೂರ್ತಿಗಳ ಸಂಗೀತ ಇಲ್ಲೂ ಗಮನ ಸೆಳೆಯುತ್ತಿದೆ.

**ಇದು ಆ ಚಿತ್ರದ ಮುಂದುವರೆದ ಕತೆ ಅಲ್ವೇ ಅಲ್ಲ**

ಚಿತ್ರ ಬಂದ್ಮೇಲೆ ಈ ಸಿನಿಮಾದ ಹಾಡುಗಳು ಹಿಟ್ ಆದರೂ ಆಗಬಹುದು. ಆ ರೀತಿನೇ ಈ ಗೀತೆಗಳು ಫೀಲ್ ಕೊಡ್ತಿವೆ. ಇಡೀ ಕತೆಯ ಜೊತೆಗೆ ಹಾಡು ನೋಡುವ ಅನುಭವ ಬೇರೆ ಇರುತ್ತದೆ.

**ಮೇಷ್ಟ್ರು ಬರೆದ ಕಥೆ**

ನಾಗತಿಹಳ್ಳಿ ಮೇಷ್ಟ್ರ ಈ ಚಿತ್ರಕ್ಕೆ ಕತೆ ಬರೆದಿದ್ದಾರೆ. ಡೈರೆಕ್ಷನ್ ಕೂಡ ಇವರೇ ಮಾಡಿದ್ದಾರೆ. ಎಸ್ ಕೆ ರಾವ್ ಕ್ಯಾಮರಾವರ್ಕ್ ಮಾಡಿದ್ದಾರೆ. ಇವರ ಈ ಚಿತ್ರದಲ್ಲಿ ನಿರೂಪ್ ಭಂಡಾರಿ, ಪೃಥ್ವಿ ಅಂಬಾರ್, ಶಾನ್ವಿ ಶ್ರೀವಾಸ್ತವ್ ಪ್ರಮುಖಪಾತ್ರದಲ್ಲಿ ಅಭಿನಯಿಸಿದ್ದಾರೆ. ಅಚ್ಯುತಕುಮಾರ್, ರೀತು ಸಿಂಗ್, ಮಂಡ್ಯ ರಮೇಶ್, ಮಾನಸಿ ಸುಧೀರ್ ಸಹ ಅಭಿನಯಿಸಿದ್ದಾರೆ.

ಈ ಚಿತ್ರ ತನ್ನ ಟೈಟಲ್‌ನಿಂದಲೇ ಗಮನ ಸೆಳೆಯುತ್ತಿದೆ. ಹಾಡು ಮತ್ತು ಟ್ರೈಲರ್ ಕೂಡ ಒಂದು ಸೆಳೆತವನ್ನ ಕ್ರಿಯೇಟ್ ಮಾಡಿವೆ. ಅಮೇರಿಕಾ ಅಮೇರಿಕಾ ಚಿತ್ರ ನೋಡಿದವರಿಗೆ ಈ ಚಿತ್ರ ಒಂದು ನಿರೀಕ್ಷೆ ಹುಟ್ಟುಹಾಕಿದೆ ಅಂತಲೂ ಹೇಳಬಹುದು.






# ಕೋಮಲ್ ಅಭಿಮಾನಿಗಳಿಗೆ ಗುಡ್ ನ್ಯೂಸ್

**ಹೊಸ ಸಿನಿಮಾದ ಫಸ್ಟ್ ಲುಕ್ ರಿಲೀಸ್!** ಹಾಸ್ಯ ನಾಯಕ ನಟ ಕೋಮಲ್ ಕುಮಾರ್ ಹೊಸ ಚಿತ್ರದ ಹೊಸ ಸುದ್ದಿ ಹೊರ ಬಂದಿದೆ. ಇದು ಹಾಡಿನ ವಿಚಾರವಾದರೂ ವಿಶೇಷ ದಿನವೇ ಇದರ ಝಲಕ್ ಸಿಗಲಿದೆ. ವಿಜಯವಾಡದಲ್ಲಿ ಇದರ ಶೂಟಿಂಗ್ ಆಗಿದೆ. ಇನ್ನು ಸುಮಾರು ವಿಚಾರ ಇವೆ. ಅದರ ವಿವರ ಇಲ್ಲಿದೆ ಓದಿ.

ಕೋಮಲ್ ಕುಮಾರ್ ಅಭಿನಯದ ರೋಲೆಕ್ಸ್ ಚಿತ್ರದ ಬಹುತೇಕ ಕೆಲಸ ಪೂರ್ಣ ಆಗಿದೆ. ಬಿಟ್ಟಿರೋ ಟೀಸರ್ ಕೂಡ ಕುತೂಹಲ ಮೂಡಿಸಿದೆ. ಈ ಚಿತ್ರದಲ್ಲಿರೋ ನಾಲ್ಕು ಹಾಡುಗಳಿಗೆ ಜೆಸ್ಸಿ ಗಿಫ್ಟ್ ಮ್ಯೂಸಿಕ್ ಮಾಡಿದ್ದಾರೆ. ಅಕ್ಟೋಬರ್ ಅಲ್ಲಿಯೇ ಈ ಚಿತ್ರ ರಿಲೀಸ್ ಮಾಡುವ ಪ್ಲಾನ್ ಕೂಡ ನಡ್ತೀದೆ. ಆದರೆ, ಇದೀಗ ವಿಷಯ ಇದಲ್ಲ ಬಿಡಿ. ಈ ಸಿನಿಮಾದ ಒಂದು ಹಾಡಿನ ಹೊಸ ವಿಷಯವನ್ನ ಚಿತ್ರ ತಂಡ ಹೇಳಿಕೊಂಡಿದೆ. ಅದೇನು ಅನ್ನೋದು ಇಲ್ಲಿದೆ ಓದಿ.

**ರೋಲೆಕ್ಸ್ ಸಿನಿಮಾ**

ರೋಲೆಕ್ಸ್ ಸಿನಿಮಾದ ಒಂದು ಹಾಡು ರಿಲೀಸ್ ಆಗುತ್ತಿದೆ. ಟೀಸರ್ ಸೌಂಡ್ ಮಾಡಿರೋದು ಗೊತ್ತೇ ಇದೆ. ಆದರೆ, ಇದು ಮತ್ತೊಂದು ಹಾಡಿನ ಮಾತಾಗಿದೆ.

ಸುಮಧುರವಾದ ಈ ಹಾಡನ್ನ ಒಂದು ವಿಶೇಷ ದಿನ ರಿಲೀಸ್ ಮಾಡ್ಬೇಕು ಅನ್ನೋದು ಚಿತ್ರ ತಂಡದ ಯೋಚನೆ ಆಗಿದೆ. ಅದನ್ನ ಈಗ ಸಿನಿಮಾ ತಂಡ ಹೇಳಿಕೊಂಡಿದೆ.

**ಗಣೇಶ್ ಹಬ್ಬಕ್ಕೆ ಸಾಂಗ್ ರಿಲೀಸ್**

ವಿಘ್ನವಿನಾಶಕ ಗಣೇಶನ ಹಬ್ಬ ಇನ್ನೇನು ಬಂದೇ ಬಿಡ್ತು ನೋಡಿ. ಇನ್ನು ನಾಲ್ಕು ದಿನ ಕಳೆದರೆ ಆಯಿತು. ಹಬ್ಬ ಬಂದೇ ಬಿಡುತ್ತದೆ.

ಈ ಹಿನ್ನೆಲೆಯಲ್ಲಿ ಚಿತ್ರ ತಂಡ ಒಂದು ಪ್ಲಾನ್ ಮಾಡಿದೆ. ಈ ಪ್ಲಾನ್ ಏನು ಗೊತ್ತಾ? ಗಣೇಶ ಹಬ್ಬ ಸೆಪ್ಟೆಂಬರ್-14 ರಂದು ಇದೆ. ಈ ದಿನ ಚಿತ್ರದ ಆ ಒಂದು ಸುಮಧುರವಾದ ಹಾಡನ್ನ ರಿಲೀಸ್ ಮಾಡ್ಬೇಕು ಅಂತಲೇ ಅಂದುಕೊಂಡಿದೆ. ಈ ವಿಷಯವನ್ನ ಅಧಿಕೃತವಾಗಿಯೂ ಇದೀಗ ಹೇಳಿದೆ.

**ಜೆಸ್ಸಿ ಗಿಫ್ಟ್ ಮ್ಯೂಸಿಕ್**

ಈಗಾಗಲೇ ಹೇಳಿದಂತೆ ಈ ಚಿತ್ರಕ್ಕೆ ಜೆಸ್ಸಿ ಗಿಫ್ಟ್ ಮ್ಯೂಸಿಕ್ ಮಾಡಿದ್ದಾರೆ. ಇರೋ ನಾಲ್ಕೇ ನಾಲ್ಕು ಹಾಡುಗಳನ್ನ ಕಂಪೋಸ್ ಮಾಡಿದ್ದಾರೆ.

ಇವರು ಕಂಪೋಸ್ ಮಾಡಿರೋ ಆ ಗೀತೆ ಸುಮಧುರವಾಗಿದೆ. ವಿಜಯ್ ಪ್ರಕಾಶ್ ಈ ಗೀತೆಯನ್ನ ಹಾಡಿದ್ದಾರೆ. ವಿ.ನಾಗೇಂದ್ರ ಪ್ರಸಾದ್ ಬರೆದಿದ್ದಾರೆ. ಈ ಗೀತೆಯನ್ನೆ ಗಣೇಶ ಹಬ್ಬಕ್ಕೆ ರಿಲೀಸ್ ಮಾಡ್ತಿದ್ದಾರೆ.

**ರೋಲೆಕ್ಸ್ ಸಿನಿಮಾ**

ಆದರೆ, ಹಬ್ಬಕ್ಕೆ ರಿಲೀಸ್ ಆಗ್ತಿರೋದು ವಿಡಿಯೋ ಸಾಂಗ್ ಏನೂ ಅಲ್ಲ, ಬದಲಾಗಿ ಲಿರಿಕಲ್ ವಿಡಿಯೋನೇ ಆಗಿದೆ. ಈ ಒಂದು ಲಿಕಲ್ ವಿಡಿಯೋ ಹೇಗೆ ಇರುತ್ತದೆ ಅನ್ನುವ ಸಹಜ ಕುತೂಹಲ ಈಗ ಮೂಡಿದಿದೆ.

ಈ ಒಂದು ಹಾಡನ್ನ ಆಂಧ್ರದ ವಿಜಯವಾಡದಲ್ಲಿ ಚಿತ್ರೀಕರಣ ಮಾಡಲಾಗಿದೆ. ಸಿನಿಮಾದಲ್ಲಿ ನಟಿ ಸೋನಲ್ ಮೊಂಥೆರೋ ಇದ್ದಾರೆ. ಮರಿ ಟೈಗರ್ ವಿನೋದ್ ಪ್ರಭಾಕರ್ ನಟಿಸಿದ್ದಾರೆ. ಇವರದು ಈ ಚಿತ್ರದಲ್ಲಿ ವಿಶೇಷ ಪಾತ್ರವೇ ಆಗಿದೆ.

**ಅಕ್ಟೋಬರ್ ಅಲ್ಲಿ ಪ್ಲಾನ್**

ಅಕ್ಟೋಬರ್ ತಿಂಗಳಲ್ಲಿ ಈ ಚಿತ್ರ ರಿಲೀಸ್ ಮಾಡುವ ಪ್ಲಾನ್ ಇದೆ. ಈ ನಿಟ್ಟಿನಲ್ಲಿಯೇ ಚಿತ್ರ ತಂಡ ಕೆಲಸ ಮಾಡ್ತಿದೆ. ಆದರೆ, ಇನ್ನು ಡೇಟ್ ಏನು ಫಿಕ್ಸ್ ಮಾಡಿಲ್ಲ.

ಸದ್ಯಕ್ಕೆ ಇಷ್ಟು ಸುದ್ದಿ ಇದೆ. ಇನ್ನು ಈ ಚಿತ್ರಕ್ಕೆ ರಾಕೇಶ್ ಸಿ ತಿಲಕ್ ಛಾಯಾಗ್ರಹಣ ಮಾಡಿದ್ದಾರೆ. ಅಂಬಟಿ ಮಧು ಮೋಹನ್ ಈ ಚಿತ್ರವನ್ನ ನಿರ್ಮಾಣ ಮಾಡಿದ್ದಾರೆ. ಶ್ರೀನಿವಾಸ್ ಮಂಡ್ಯ ಈ ಚಿತ್ರವನ್ನ ಡೈರೆಕ್ಷನ್ ಮಾಡಿದ್ದಾರೆ ಅಂತ ಹೇಳಬಹುದು.

# ಲೂಸಿಯಾ ಪಾರ್ಟ್ 2 ಬರ್ತಿದೆ, ನಿರ್ದೇಶಕ ಪವನ್ ಕುಮಾರ್ ಮಹತ್ವದ ಘೋಷಣೆ

ಲೂಸಿಯಾ ಎಂಬ ಗಟ್ಟಿಕಥೆಯ ಸಿನಿಮಾ ಬಂದು 13 ವರ್ಷಗಳಾಗಿವೆ. ಆ ಹಿನ್ನೆಲೆಯಲ್ಲಿ ಸೋಷಿಯಲ್ ಮೀಡಿಯಾದಲ್ಲಿ ಸಿನಿಮಾ ನಿರ್ದೇಶಕ ಪವನ್ ಕುಮಾರ್ ಮಹತ್ವದ ಘೋಷಣೆಯೊಂದನ್ನು ಮಾಡಿದ್ದಾರೆ. ಅವರು ಈ ಸಿನಿಮಾದ ಎರಡನೇ ಭಾಗವನ್ನು ಆರಂಭಿಸುವುದಾಗಿ ಹೇಳಿದ್ದಾರೆ. ಸಾಕಷ್ಟು ಪ್ರತಿಭೆಗಳನ್ನು ಹೊರತಂದ ಈ ಟ್ರೆಂಡ್‌ಸೆಟ್ಟರ್ ಸಿನಿಮಾದ ಬಗ್ಗೆ ಪವನ್ ಸೋಷಿಯಲ್ ಮೀಡಿಯಾದಲ್ಲಿ ಹೇಳುತ್ತಿದ್ದಂತೆ ಸಿನಿಮಾಸಕ್ತರ ಕುತೂಹಲ ಹೆಚ್ಚಾಗಿದೆ. ಇಂಥಾದ್ದೊಂದು ಕಲ್ಟ್ ಸಿನಿಮಾದ ಮುಂದುವರಿದ ಭಾಗಕ್ಕಾಗಿ ಎದುರು ನೋಡುತ್ತಿರುವುದಾಗಿ ಜನ ಹೇಳುತ್ತಿದ್ದಾರೆ. ಈ ಸಿನಿಮಾದ ಎರಡನೇ ಭಾಗದ ಕಥೆಯ ಎಳೆ ಪವನ್ ಅವರ ತಲೆಯಲ್ಲಿರುವಂತಿದೆ. ಅದು ಸ್ಕ್ರೀನ್ ಮೇಲೆ ಹೇಗೆ ಬರಬಹುದು ಅನ್ನುವುದು ಸದ್ಯದ ಕುತೂಹಲ.

**ಪವನ್ ಕುಮಾರ್ ಲೂಸಿಯಾ 2 ಬಗ್ಗೆ ಏನು ಹೇಳ್ತಾರೆ:** ಸೋಷಿಯಲ್ ಮೀಡಿಯಾದಲ್ಲಿ ಈ ಬಗ್ಗೆ ಪವನ್ ಕುಮಾರ್ ಮಾತನಾಡಿದ್ದಾರೆ. ಇವತ್ತಿಗೆ ಲೂಸಿಯಾ ಸಿನಿಮಾ ತೆರೆಕಂಡು 13 ವರ್ಷ ಅಂತೆ. ನಿನ್ನೆ ಸಾಕಷ್ಟು ಜನ ಮೆಸೇಜ್ ಮಾಡಿ ಈ ಸಿನಿಮಾ ಬಗ್ಗೆ ಮಾತನಾಡಿದ್ದರು. ಇವತ್ತು ಸ್ನೇಹಿತರು ಸಿನಿಮಾ ಸ್ಕ್ರೀನಿಂಗ್ ಸಹ ಇಟ್ಟುಕೊಂಡಿದ್ದಾರೆ. ಈ ಹದಿಮೂರು ವರ್ಷಗಳಲ್ಲಿ ಅದರ ಎರಡನೇ ಭಾಗ ಮಾಡಬೇಕು ಅಂತ ನನಗೆ ಅನಿಸಿಯೇ ಇರಲಿಲ್ಲ. ಅದರ ಬಗ್ಗೆ ಸಾಕಷ್ಟು ಜನ ಹೇಳಿದ್ರೂ, ನನಗದು ಅಲ್ಲಿಗೇ ಮುಗಿದು ಹೋಯ್ತು ಅಂತನೇ ಇದ್ದಿದ್ದು. ನಿನ್ನೆ ಮಧ್ಯಾಹ್ನ, ಸಾಯಂಕಾಲದಿಂದ ಯಾಕೋ ಇನ್ನೊಂದು ಸಲ ಆ ಪಾತ್ರಗಳಿಗೆ ಒಂದು ಕತೆ ಕೊಡಬಹುದಲ್ವಾ ಅನಿಸಿತು. ಗಟ್ ಫೀಲಿಂಗ್ ಸ್ಟ್ರಾಂಗ್ ಆಗಿ ಮತ್ತೆ ಒಮ್ಮೆ ಪ್ರಯತ್ನ ಪಡಬಹುದಲ್ವಾ ಅನಿಸಿತು. ಇಷ್ಟು ವರ್ಷ ಈ ಬಗ್ಗೆ ಭಯ ಇತ್ತು ಅಂತ ಹೇಳಬಹುದು. ಅಂದರೆ ಫಿಯರ್ ಆಫ್ ಫೈಲ್ಯೂರ್ ಥರ. ಹೀಗಾಗಿ ನಾನು ಈ ಬಗ್ಗೆ ಯೋಚನೆಯನ್ನೂ ಮಾಡಿರಲಿಲ್ಲ. ಈಗ ಆ ಯೋಚನೆ ಬರುತ್ತಿದೆ ಅಂತಿದ್ದಾರೆ.

**ಎಷ್ಟೋ ಜನ ಪ್ರತಿಭೆಗಳನ್ನು ಕೊಟ್ಟ ಸಿನಿಮಾ:** ಟ್ರೆಂಡ್ ಸೆಟ್ಟರ್ ಸಿನಿಮಾ




ಲೂಸಿಯಾದಿಂದ ಅನೇಕ ಪ್ರತಿಭೆಗಳು ಹೊರಬಂದಿದ್ದಾರೆ. ನೀನಾಸಂ ಸತೀಶ್ ಅವರಿಗೆ ನಾಯಕನ ಇಮೇಜ್ ಕೊಟ್ಟ ಸಿನಿಮಾವದು. ಅಲ್ಲೀವರೆಗೆ ಹಾಸ್ಯ ಕಲಾವಿದನಾಗಿ ಗುರುತಿಸಿಕೊಂಡಿದ್ದ ಸತೀಶ್ ಈ ಸಿನಿಮಾದ ಬಳಿಕ ಹೀರೋ ಆಗಿ ಎಸ್ಟಾಬ್ಲಿಷ್ ಆದರು. ಅವರಿಗೆ ಈ ಸಿನಿಮಾದಿಂದ ಸಿಕ್ಕ ಹೆಸರೂ ದೊಡ್ಡದೇ. ಹರಿಪ್ರಿಯಾ ಅವರು ಈ ಸಿನಿಮಾದ ನಾಯಕಿಯಾಗಿದ್ದರು. ಅದೇ ರೀತಿ ಅನೇಕ ಕಲಾವಿದರು ಈ ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಗುರುತಿಸಿಕೊಂಡು ಮುಂದೆ ಒಳ್ಳೊಳ್ಳೆ ಅವಕಾಶ ಪಡೆಯತೊಡಗಿದರು.

**ನವೀನ್ ಸಜ್ಜು ಎಂಬ ಗಾಯಕ ಬಲಗಾಲಿಟ್ಟು ಬಂದ ಸಿನಿಮಾ:** ಅಲ್ಲೀವರೆಗೆ ಆರ್ಕೆಸ್ಟ್ರಾಗಳಲ್ಲಿ ಹಾಡುತ್ತಿದ್ದ ನವೀನ್ ಸಜ್ಜು ಎಂಬ ಗಾಯಕನ ಸ್ಯಾಂಡಲ್‌ವುಡ್‌ಗೆ ಎಂಟ್ರಿಕೊಟ್ಟಿದ್ದು ಈ ಸಿನಿಮಾದ ಮೂಲಕ. ಅವರನ್ನು ಈ ಸಿನಿಮಾಕ್ಕೆ ಕರೆತಂದದ್ದು ಸಂಗೀತ ನಿರ್ದೇಶಕ ಪೂರ್ಣಚಂದ್ರ ತೇಜಸ್ವಿ. ನಿರ್ದೇಶಕ ಪವನ್ ಅವರು ಪೂರ್ಣಚಂದ್ರ ತೇಜಸ್ವಿ ಅವರಿಗೆ ಒಂದು ಟಾಸ್ಕ್ ಕೊಡುತ್ತಾರೆ, ಈ ಸಿನಿಮಾದ ಹಾಡಿಗೆ ಕಚ್ಚಾ ವಾಯ್ಸ್ ಬೇಕು, ಅದು ಹೇಗಾದ್ರೂ ಸರಿ ಹೊಸ ಪ್ರತಿಭೆಯಿಂದ ಆ ಹಾಡನ್ನು ಹಾಡಿಸಬೇಕು ಅಂತ. ಇದಕ್ಕಾಗಿ ಗಾಯಕನನ್ನು ಹುಡುಕಿಕೊಂಡು ಸಂಗೀತ ನಿರ್ದೇಶಕ ತೇಜಸ್ವಿ ಊರೂರು ಅಲೆಯುತ್ತಾರೆ. ಕೊನೆಗೆ ಒಂದು ಆರ್ಕೆಸ್ಟ್ರಾದಲ್ಲಿ ಅವರು ಹುಡುಕುತ್ತಿದ್ದ ಧ್ವನಿ ಕೇಳುತ್ತದೆ. ಆ ಹುಡುಗನನ್ನು ಹುಡುಗಿ ಸಿನಿಮಾ ಗಾಯನಕ್ಕೆ ಟ್ರೈನಿಂಗ್ ಕೊಡ್ತಾರೆ. ನಡುವೆ ಈ ಸಿನಿಮಾ ಸಹವಾಸವೇ ಅಲ್ಲ ಅಂತ ಬಿಟ್ಟುಹೋದವನನ್ನು ಮರಳಿ ಕರೆತರುತ್ತಾರೆ. ಕಠಿಣ ತರಬೇತಿ ಕೊಟ್ಟು ಸಿನಿಮಾಕ್ಕೆ ಹಾಡಿಸುತ್ತಾರೆ. ಆತ ಹಾಡಿದ ಹಾಡುಗಳು ಸೂಪರ್ ಹಿಟ್ ಆಗುತ್ತವೆ. ಇಂದು ನವೀನ್ ಸಜ್ಜು ಸಿನಿಮಾರಂಗದಲ್ಲಿ ಸಾಕಷ್ಟು ಹೆಸರು ಮಾಡಿದ್ದಾರೆ. ಕಳೆದ ವರ್ಷ ಕೋಟಿಗಟ್ಟಲೆ ಬೆಲೆಬಾಳುವ ಮನೆಯನ್ನೂ ಕಟ್ಟಿಸಿದ್ದಾರೆ.

**ಕ್ರೌಡ್ ಫಂಡಿಂಗ್‌ಗೆ ಆಹ್ವಾನ:** ಪವನ್ ಕುಮಾರ್ ಲೂಸಿಯಾ ಸಿನಿಮಾ ಮಾಡಿದ್ದು ಕ್ರೌಡ್ ಫಂಡಿಂಗ್ ಮೂಲಕ. ಅನೇಕರು ಸ್ಟಾರ್‌ಗಳು ಇದರಿಂದ ಹುಟ್ಟಿದ್ದಾರೆ. ಈ ಬಗ್ಗೆ ಪವನ್‌ಗೆ ಖುಷಿ ಇದೆ. ಅಷ್ಟು ಜನ ಜೊತೆಗೆ ಬಂದು ಏನೋ ಮಾಡಿದಾಗ ಬಂದ ಎನರ್ಜಿ ಬಗ್ಗೆ ಪವನ್ ಮಾತನಾಡ್ತಾ ಹೀಗನ್ನುತ್ತಾರೆ. ಆಗ ನನಗೆ 28 ವರ್ಷ ಆಗಿತ್ತು. ಈಗ 44 ಆಗಿದೆ. ಆ ಮ್ಯಾಡ್‌ನೆಸ್ ಅಷ್ಟಿಲ್ಲ. ನಾವೆಲ್ಲ ಮತ್ತೆ ಸೇರಿದ್ರೆ ಆ ಮ್ಯಾಡ್‌ನೆಸ್ ಮತ್ತೆ ಬರಬಹುದು. ಸದ್ಯ ಈಗ ಘೋಷಿಸಿರುವ ಈ ಪ್ರಾಜೆಕ್ಟ್‌ನಲ್ಲಿ ನಾನೊಬ್ನೇ ಇದ್ದೀನಿ. ಒಂದೊಳ್ಳೆ ಸಿನಿಮಾಕ್ಕೆ ಒಂದಿಷ್ಟು ಜನ ಕೈ ಜೋಡಿಸಬಹುದು, ಒಳ್ಳೆಯ ಸಿನಿಮಾ ಮಾಡಬಹುದು ಅನಿಸುತ್ತೆ ಎಂಬ ಮಾತನ್ನೂ ಹೇಳಿ ಕ್ರೌಡ್ ಫಂಡಿಂಗ್‌ಗೆ ಆಹ್ವಾನ ನೀಡಿದ್ದಾರೆ.

# ಮತ್ತೊಮ್ಮೆ ಖಾಕಿ ತೊಡಲಿದ್ದಾರೆ ದೇವರಾಜ್

## ಈ ಬಾರಿ ಯಾವ ಸಿನಿಮಾದಲ್ಲಿ ಗೊತ್ತಾ?

ಮಹಾನ್ ಚಿತ್ರದಲ್ಲಿ ತಾರೆಯರ ದೊಡ್ಡ ದಂಡೇ ಇದೆ. ಡೈನಾಮಿಕ್ ದೇವರಾಜ್ ಅವರು ಇಲ್ಲಿ ಪೊಲೀಸ್ ರೋಲ್ ಮಾಡಿದ್ದಾರೆ. ಬಹು ದಿನಗಳ ಬಳಿಕ ಈ ಪಾತ್ರದಲ್ಲಿ ನಟಿಸಿದ್ದಾರೆ. ಇವರ ಈ ಹೊಸ ಚಿತ್ರದ ಇನ್ನಷ್ಟು ಮಾಹಿತಿ ಇಲ್ಲಿದೆ ಓದಿ.

**ಮತ್ತೊಮ್ಮೆ ಪೊಲೀಸ್ ಪಾತ್ರದಲ್ಲಿ ದೇವರಾಜ್.!**

ಡೈನಾಮಿಕ್ ದೇವರಾಜ್ ಅವರು ಪೊಲೀಸ್ ಪಾತ್ರಕ್ಕೆ ಹೆಸರುವಾಸಿ ಅನ್ನೋದು ಗೊತ್ತೇ ಇದೆ. ಆರಂಭದಲ್ಲಿ ವಿಲನ್ ಪಾತ್ರ ಮಾಡಿದ್ದರೂ ಕೂಡ ಮುಂದೆ ಹೀರೋ ಆಗಿಯೇ ನಟಿಸಿದರು. ಆದರೆ, ಇವರು ಹೆಚ್ಚಾಗಿ ಪೊಲೀಸ್ ಪಾತ್ರಕ್ಕೆ ಫೇಮಸ್ ಅಂದ್ರೂ ತಪ್ಪಿಲ್ಲ ಬಿಡಿ. ತುಂಬಾ ದಿನಗಳ ಬಳಿಕ ಡೈನಾಮಿಕ್ ದೇವರಾಜ್ ಅವರು ಪೊಲೀಸ್ ಆಫೀಸರ್ ರೋಲ್ ಮಾಡಿದ್ದಾರೆ. ಈ ಚಿತ್ರದಲ್ಲಿ ಕನ್ನಡದ ಮಹಾನ್ ನಟರೂ ಇದ್ದಾರೆ. ಇವರೆಲ್ಲರ ಪರಿಚಯದ ಒಂದು ಸ್ಟೋರಿ ಇಲ್ಲಿದೆ ಓದಿ.

**ಮಹಾನ್ ಚಿತ್ರದಲ್ಲಿ ದೇವರಾಜ್**

ದೇವರಾಜ್ ಅವರು ಮಹಾನ್ ಚಿತ್ರದಲ್ಲಿ ಪೊಲೀಸ್ ಆಫೀಸರ್ ರೋಲ್ ಮಾಡಿದ್ದಾರೆ. ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಪಾತ್ರವನ್ನೆ ಇಲ್ಲಿ ನಿರ್ವಹಿಸಿದ್ದಾರೆ.

**ಈ ಚಿತ್ರ ಯಾವುದು ಗೊತ್ತಾ.?**

ಈ ಒಂದು ಪಾತ್ರಕ್ಕೆ ಇವರೇ ಸೂಕ್ತ ಅಂತಲೇ ಡೈರೆಕ್ಟರ್ ಪಿ.ಸಿ.ಶೇಖರ್ ಪ್ಲಾನ್ ಮಾಡಿದ್ದಾರೆ. ಹಾಗಾಗಿಯೇ ದೇವರಾಜ್ ಅವರು ಪೊಲೀಸ್ ಪಾತ್ರದಲ್ಲಿಯೇ ಮತ್ತೊಮ್ಮೆ ಕಾಣಿಸಿಕೊಂಡಿದ್ದಾರೆ.

**ರಮೇಶ್ ಇಂದಿರಾ**

ಈ ಚಿತ್ರದಲ್ಲಿ ರಮೇಶ್ ಇಂದಿರಾ ಅವರೂ ಇದ್ದಾರೆ. ಇವರು ಕೂಡ ಪೊಲೀಸ್ ರೋಲ್ ಮಾಡಿದ್ದಾರೆ. ಆದರೆ, ದೇವರಾಜ್ ಅವರ ಕಳೆಗೆ ಕೆಲಸ ಪೊಲೀಸ್ ಇವರಾಗಿದ್ದಾರೆ.

ಇವರ ಅಭಿನಯದ ಈಗೀಗ ಭಾರೀ ಪಾಪ್ಯೂಲರ್ ಆಗುತ್ತಿದೆ. ಸದ್ಯ ಬರ್ತಿರೋ ಸಿನಿಮಾಗಳಲ್ಲಿ ಇವರಿಗೊಂದು ರೋಲ್ ಪಕ್ಕಾ ಇರುತ್ತದೆ.

ಕರಾವಳಿ ಚಿತ್ರದಲ್ಲಿ ಇವರು ವಿಲನ್ ರೋಲ್ ಮಾಡಿದ್ದಾರೆ. ಸಪ್ತಸಾಗರದಾಚೆ ಎಲ್ಲೋ ಚಿತ್ರದಲ್ಲೂ ವಿಲನ್ ರೋಲ್ ಮಾಡಿದ್ದರು. ಆದರೆ, ಇಲ್ಲಿ ಪೊಲೀಸ್ ಆಗಿದ್ದಾರೆ.

**ರಮೇಶ್ ಭಟ್**

ಈ ಮಹಾನ್ ಚಿತ್ರದಲ್ಲಿ ರಮೇಶ್ ಭಟ್ ಅವರೂ ಇದ್ದಾರೆ. ಇವರು ಈ ಚಿತ್ರದಲ್ಲಿ ವೈದ್ಯನ ಪಾತ್ರ ಮಾಡಿದ್ದಾರೆ. ಇವರ ಅಭಿನಯ ಮತ್ತು ಅನುಭವ ಎರಡೂ ವಿಭಿನ್ನವಾಗಿಯೇ ಇರುತ್ತವೆ.



ಹಾಗಾಗಿಯೇ ಈ ಚಿತ್ರದಲ್ಲಿ ಇವರು ವಿಭಿನ್ನವಾಗಿಯೇ ಕಾಣಿಸುತ್ತಿದ್ದಾರೆ. ಇವರ ಪಾತ್ರದ ಪೋಸ್ಟರ್ ಕೂಡ ರಿಲೀಸ್ ಆಗಿದೆ.

**ಶರತ್ ಲೋಹಿತಾಶ್ವ**

ಶರತ್ ಲೋಹಿತಾಶ್ವ ಅವರ ಧ್ವನಿಯ ಆಳವೇ ಬೇರೆ ಇರುತ್ತದೆ. ಅಭಿನಯದ ಖದರ್ ಕೂಡ ವಿಭಿನ್ನವಾಗಿಯೇ ಇದೆ ಬಿಡಿ. ಆ ರೀತಿಯ ಶರತ್ ಲೋಹಿತಾಶ್ವ ಅವರು ಈ ಚಿತ್ರದಲ್ಲಿ ಧಾರ್ಮಿಕ ಗುರುವಿನ ಪಾತ್ರ ಮಾಡಿದ್ದಾರೆ.

ಈ ಚಿತ್ರದಲ್ಲಿ ಹಿರಿಯ ನಟ ಅವಿನಾಶ್ ಅವರೂ ಇದ್ದಾರೆ. ಇವರ ಪಾತ್ರದ ಊರಿಗೆಲ್ಲ ಒಳ್ಳೆಯದನ್ನ ಬಯಸುವ ಪಾತ್ರವೇ ಆಗಿದೆ. ಸೇನೆಯ ಮಹತ್ವವನ್ನು ತಿಳಿಸುವ ಕೆಲಸವನ್ನ ಈ ಪಾತ್ರ ಮಾಡುತ್ತದೆ. ಅಂದ್ರೆ ಈ ಚಿತ್ರದಲ್ಲಿ ಇವರು ಹೆಮ್ಮೆಯ ಶಸ್ತಿನ ಸಿಪಾಯಿ ಆಗಿದ್ದಾರೆ.

**ಮಹಾನ್ ಶಿವರಾಜ್‌ಕುಮಾರ್**

ಮಹಾನ್ ಚಿತ್ರದಲ್ಲಿ ಶಿವರಾಜ್ ಕುಮಾರ್ ಇದ್ದಾರೆ. ಇವರು ವಿಶೇಷ ರೋಲ್ ಮಾಡಿದ್ದಾರೆ. ಅಂದ್ರೆ ಇವರೇ ಈ ಚಿತ್ರದಲ್ಲಿ ಮಹಾನ್ ಅನ್ನೋದನ್ನ ಪಿ.ಸಿ.ಶೇಖರ್ ಹೇಳಿಕೊಂಡಿದ್ದಾರೆ.

ಶಿವರಾಜ್ ಕುಮಾರ್ ಈ ಚಿತ್ರದಲ್ಲಿ ಲಾಯರ್ ಪಾತ್ರ ಮಾಡಿದ್ದಾರೆ. ಇವರ ಪಾತ್ರದ ಪೋಸ್ಟರ್ ಕೂಡ ರಿಲೀಸ್ ಆಗಿದೆ. ಈ ಚಿತ್ರದಲ್ಲಿ ವಿಜಯ್ ರಾಘವೇಂದ್ರ ರೈತನ ಪಾತ್ರ ಮಾಡಿದ್ದಾರೆ.

ರಂಗಾಯಣ ರಘು ಇಲ್ಲಿ ರೈತ ಮುಖಂಡನ ರೋಲ್ ಮಾಡಿದ್ದಾರೆ. ಇವರ ಈ ಚಿತ್ರದಲ್ಲಿ ಇನ್ನು ಹಲವು ಕಲಾವಿದರು ಅಭಿನಯಿಸಿದ್ದಾರೆ.

**ಚಿತ್ರದ ಇತರ ಕಲಾವಿದರು**

ರಾಧಿಕಾ ನಾರಾಯಣ್, ಮಿತ್ರ, ನಮ್ರತಾ ಗೌಡ, ವರ್ಷ ಬೊಳ್ಳಮ್ಮ, ಕಿರಣ್ ಶ್ರೀನಿವಾಸ್ ಸಹ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಮಾಡಿದ್ದಾರೆ. ವಿ. ನಾಗೇಂದ್ರ ಪ್ರಸಾದ್ ಹಾಡುಗಳನ್ನ ಬರೆದಿದ್ದಾರೆ. ಎಸ್. ವೈದಿ ಕ್ಯಾಮರಾವರ್ಕ್ ಮಾಡಿದ್ದಾರೆ. ಪ್ರಶಾಂತ್ ರಾಜಪ್ಪ ಡೈಲಾಗ್ ಬರೆದಿದ್ದಾರೆ ಅಂತ ಹೇಳಬಹುದು.

# ಬ್ಲಾಗರ್‌ಗಳ ಬದುಕಿನಲ್ಲೊಂದು ಭಯಾನಕ ತಿರುವು

6-5=2 ಬಳಿಕ ಬಂತು ವಿಡಿಯೋ ವೈರಲ್

ದೀಕ್ಷಿತ್ ಶೆಟ್ಟಿ ನಿರ್ಮಾಣದ ವಿಡಿಯೋ ಚಿತ್ರದ ಹಾರರ್ ಟ್ರೇಲರ್ ಬಿಡುಗಡೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಗಮನ ಸೆಳೆಯುತ್ತಿದೆ. ಶ್ರೀನಿಧಿ ಬೆಂಗಳೂರು ನಿರ್ದೇಶನದ ಈ ಫೌಂಡ್ ಫೂಟೇಜ್ ಹಾರರ್ ಥ್ರಿಲ್ಲರ್ ಸಿನಿಮಾದಲ್ಲಿ ಬಿಜಿಎಂ ಇಲ್ಲದೆ 12 ಕ್ಯಾಮೆರಾಗಳನ್ನು ಬಳಸಿ ಚಿತ್ರೀಕರಣ ಮಾಡಲಾಗಿದೆ.

ಪ್ಯಾನ್ ಇಂಡಿಯಾ ನಟ ದೀಕ್ಷಿತ್ ಶೆಟ್ಟಿ ನಿರ್ಮಾಣದ ವಿಡಿಯೋ ಚಿತ್ರದ ಟ್ರೇಲರ್ ಬಿಡುಗಡೆ ಆಗಿದ್ದು, ವಿನೂತನವಾಗಿ ಮೂಡಿಬಂದಿದೆ. ಸಾಮಾಜಿಕ ಜಾಲತಾಣಗಳಲ್ಲಿ ಈ ಹಾರರ್ ಟ್ರೇಲರ್ ದೊಡ್ಡ ಪ್ರಮಾಣದಲ್ಲಿ ಹಂಚಿಕೆ ಆಗುತ್ತಿದ್ದು, ಕುತೂಹಲ ಮತ್ತು ಚಿತ್ರದ ಮೇಲೆ ನಿರೀಕ್ಷೆ ಹುಟ್ಟಿಸಿದೆ.



6-5=2 ಚಿತ್ರವು ಇದೇ ರೀತಿ ಕುತೂಹಲ ಮೂಡಿಸಿತ್ತು. ಸೆ.11ಕ್ಕೆ ತೆರೆಗೆ ಬರಲಿರುವ ಈ ಚಿತ್ರವನ್ನು ಬ್ಲಿಂಕ್ ಚಿತ್ರದ ಖ್ಯಾತಿಯ ಶ್ರೀನಿಧಿ ಬೆಂಗಳೂರು ನಿರ್ದೇಶಿಸಿದ್ದಾರೆ. ವಿಶೇಷ ಎಂದರೆ ಎರಡು ವಾರಗಳ ಮೊದಲೇ ಆಯ್ದ ಪ್ರೇಕ್ಷಕರಿಗೆ ಚಿತ್ರದ ಪೇಯ್ಡ್ ಪ್ರೀಮಿಯರ್ ಶೋ ಹಾಕಲಾಗಿತ್ತು.

ದೀಕ್ಷಿತ್ ಶೆಟ್ಟಿ, ಇದೊಂದು ಯೂನಿಕ್ ಕಾನ್ಸೆಪ್ಟ್ ಒಳಗೊಂಡ ಫೌಂಡ್ ಫೂಟೇಜ್ ಹಾರರ್, ಥ್ರಿಲ್ಲರ್ ಚಿತ್ರ. ನಮ್ಮ ಚಿತ್ರದಲ್ಲಿ ಬಿಜಿಎಂ ಇಲ್ಲ. 12 ಕ್ಯಾಮೆರಾ ಉಪಯೋಗಿಸಿ ಚಿತ್ರೀಕರಿಸಿದ್ದೇವೆ. ನಾನು ಬೇರೆ ಯಾವುದೇ ಭಾಷೆ ಚಿತ್ರದಲ್ಲಿ ನಟಿಸಿದರೂ, ಅಲ್ಲಿ ದುಡಿದ ದುಡ್ಡನ್ನು ಕನ್ನಡಕ್ಕೆ ತಂದು ಹಾಕುತ್ತೇನೆ. ಕಳೆದ ವಾರ ನಮ್ಮ ಚಿತ್ರದ ಪೇಯ್ಡ್ ಪ್ರೀಮಿಯರ್ ನಡೆಸಿದೆವು, ಬುಕ್ ಮೈ ಶೋನಲ್ಲಿ ಕೆಲವೇ ಗಂಟೆಗಳಲ್ಲಿ ಫುಲ್ ಆಯ್ತು. ಸಿನಿಮಾ ನೋಡಿದ ನಂತರ ಅದ್ಭುತ ಥ್ರಿಲ್ಲಿಂಗ್ ಎಕ್ಸ್‌ಪಿರಿಯನ್ಸ್ ಅನುಭವಿಸಿದ ಖುಷಿ ಪ್ರೇಕ್ಷಕರ ಮುಖದಲ್ಲೂ ಕಾಣುತ್ತಿತ್ತು ಎನ್ನುತ್ತಾರೆ.

**ಎಲ್ಲರೂ ಬ್ಲಾಗರ್‌ಗಳೇ:** ಶ್ರೀನಿಧಿ, ಹಾರರ್ ಚಿತ್ರವನ್ನು ಅದೆಷ್ಟು ನೈಜವಾಗಿ ತರಬಹುದು ಎಂದು ಯೋಚಿಸಿದಾಗ ಈ ಕಾನ್ಸೆಪ್ಟ್ ಹೊಳೆಯಿತು. ಆರಂಭದಲ್ಲಿ ಚಿತ್ರಕ್ಕೆ ಬ್ಲಾಗ್ ಎನ್ನುವ ಹೆಸರಿತ್ತು. ಯಾಕೆಂದರೆ ಚಿತ್ರದಲ್ಲಿರುವ ಎಲ್ಲರೂ ಬ್ಲಾಗರ್‌ಗಳೇ. ಇದು ಬ್ಲಾಗರ್‌ಗಳ ಬದುಕಿನ ಕತೆ. ಮೊದಲ 20 ನಿಮಿಷ ನಿಮ್ಮನ್ನು ನಗಿಸುತ್ತದೆ. ನಂತರ ಸೀಟ್ ಎಡ್ಜ್‌ನಲ್ಲಿ ಕೂರಿಸುತ್ತೆ ಎಂದರು. ಭರತ್, ಜೀವನ್ ಶಿವಕುಮಾರ್, ತೇಜಸ್ ಎಸ್.ಎಂ, ಪ್ರಿಯಾ ಜೆ.ಆಚಾರ್, ನಲ್ಮೆ ನಚಿಯಾರ್ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

# ಟಾಕ್ಸಿಕ್ ಡ್ಯಾಡಿಗಿಂತ ಹನುಮಾನ್ ಅಂಶ್‌ಗೆ ಜೈ ಅಂದ ಮಹಾಜನತೆ

ಒಂದು ಕಡೆ ಬಹುನಿರೀಕ್ಷಿತ ಟಾಕ್ಸಿಕ್ ಸಿನಿಮಾ ಟಾಕ್ಸಿಕ್ - ಫೇರಿಟೇಲ್ ಫಾರ್ ಗ್ರೋನಪ್ಸ್ ಪ್ರೇಕ್ಷಕರು ನೀಡಿರುವ ಆಘಾತದಿಂದ ಚೇತರಿಸಿಕೊಳ್ಳಲಾಗದೇ ಒದ್ದಾಡುತ್ತಿರುವಾಗ ಹನುಮಾನ್ ಅಂಶ್ ಎಂಬ ಆಧ್ಯಾತ್ಮ ಕಥಾಹಂದರದ ಕಡಿಮೆ ಬಜೆಟ್‌ನ ಸಿನಿಮಾ ಕೋಟಿ ಕೋಟಿ ಬಾಚುತ್ತಿದೆ. ಇನ್ನೊಂದೆಡೆ ಮಲಯಾಳಂನ ಬೆಥ್ಲೆಹೆಮ್ ಕುಟುಂಬ ಯೂನಿಟ್ ಅನ್ನುವ ತಿಳಿಹಾಸ್ಯದ ಸಿನಿಮಾ ಅದ್ಭುತ ಕಲೆಕ್ಷನ್ ಮಾಡಿ ತಮಿಳು ಭಾಷೆಯಲ್ಲೂ ಡಬ್ಬಿಂಗ್ ವರ್ಷನ್ ರಿಲೀಸ್ ಆಗಿದೆ. ಮೊದಲ ದಿನವೇ ಉತ್ತಮ ಗಳಿಕೆಯ ವರದಿ ಬಂದಿದೆ. ಅಲ್ಲಿಗೆ ಈ ವರ್ಷ ರಿಲೀಸ್ ಆಗಿರುವ ಧುರಂಧರ್ 2 ಬಿಟ್ಟರೆ ವೈಲೆನ್ಸ್ ಅನ್ನು ಮದರ್ ಟಂಗ್ ಆಗಿ ಮಾಡಿಕೊಂಡಿರುವ ಸಿನಿಮಾಗಳೆಲ್ಲ ಮಕಾಡೆ ಮಲಗಿವೆ. ಆಹ್ಲಾದಕರ ಚಿತ್ರಕಥೆಯ ಫ್ಯಾಮಿಲಿ ಡ್ರಾಮಾಗಳು, ಹೊಸತನದ ಚಿತ್ರಗಳು ಭರ್ಜರಿ ಯಶಸ್ಸಿನತ್ತ ಮುನ್ನುಗ್ಗುತ್ತಿವೆ.

***ಗನ್ ಆಂಡ್ ಗರ್ಲ್ ಕಾನ್ಸೆಪ್ಟ್‌ನಲ್ಲಿ ಎಷ್ಟು ಅಂತ ಕಥೆ ಹೇಳ್ತೀರಿ..***

ಗರ್ಲ್ ಆಂಡ್ ಗನ್ ಇದ್ದರೆ ಯಾರು ಬೇಕಿದ್ರೂ ಸಿನಿಮಾ ಮಾಡಬಹುದು ಅನ್ನೋದು ಹಳೇ ನಾಣ್ಣುಡಿ. ಸಿನಿಮಾವನ್ನೇನೋ ಮಾಡಬಹುದು, ಆದರೆ ಜಾಗತಿಕ ಸಿನಿಮಾಗಳನ್ನೆಲ್ಲ ಅಂಗೈಯಲ್ಲಿರುವ ಆರಿಂಚಿನ ಸ್ಕ್ರೀನ್‌ನಲ್ಲಿ ಜಾಲಾಡಿ, ಸೂಕ್ಷ್ಮಾತಿ ಸೂಕ್ಷ್ಮ ತಪ್ಪುಗಳನ್ನೂ ಸರ್ಕಲ್ ಮಾಡಿ ಮೀಸೆಯಡಿ ನಗುವ ಈ ಕಾಲದ ಪ್ರೇಕ್ಷಕನನ್ನು ಅಷ್ಟು ಸುಲಭಕ್ಕೆ ಯಾಮಾರಿಸಬಹುದೇ ಅನ್ನುವುದು ಹೊಸ ಕಾಲದ ಗಾದೆ. ಹುಡುಗಿ ಮತ್ತು ಗನ್ ಸೌಂಡಿನಲ್ಲಿ ಅನೇಕ ಸಿನಿಮಾಗಳು ಬಂದು ಹೋಗಿವೆ. ಅದನ್ನು ನೋಡಿ ನೋಡಿ ಜನರೂ ಬೇಸತ್ತಿದ್ದಾರೆ. ಹೊಸ ಪ್ರಯೋಗ ಮಾಡ್ತೀನಿ, ಕನ್ನಡ ಸಿನಿಮಾವನ್ನು ಗ್ಲೋಬಲ್‌ಗೆ ರೀಚ್ ಮಾಡ್ತೀನಿ ಅಂತೆಲ್ಲ ಹೇಳಿ ಮತ್ತದೇ ಗನ್ ಮತ್ತು ಗರ್ಲ್ ಕಥೆಯನ್ನೇ ತಿರುಗಿಸಿ ಮುರುಗಿಸಿ ಹೇಳಿದರೆ ಜನ ಏನು ತಾನೇ ಮಾಡಿಯಾರು ಅಂತಾರೆ ಈ ಕಾಲದ ಹುಡುಗ ಹುಡುಗಿಯರು.

**ಕುಟುಂಬ ತೊರೆದು ಹಿಂಸೆಗಿಳಿದವರ ಕಥೆ ಬೇಡ, ಕುಟುಂಬದ ಕಥೆ ಬೇಕು**

ವೈಲೆನ್ಸ್ ಸಿನಿಮಾಗಳ ನರನಾಡಿಗಳಲ್ಲಿ ಕ್ರೋಧದ ಧಗ ಧಗ ಇರಲೇ ಬೇಕು. ಅದಕ್ಕೆ ಹಿನ್ನೆಲೆಯಾಗಿ ಬ್ರೋಕನ್ ಫ್ಯಾಮಿಲಿ ಕಥೆ ಬೇಕು. ಕುಟುಂಬದೊಳಗೊಂದು ಕ್ರೌರ್ಯ ನಡೆದಿರಬೇಕು. ಕತೆಯ ಎಳೆಗಳಲ್ಲಿ ವ್ಯತ್ಯಾಸ ಆಗಬಹುದು, ಆದರೆ ಆಯಾಮ ಅದೇ ತಾನೇ.. ಅದದೇ ಕಥೆ ನೋಡಿ ಬೇಸತ್ತ ಪ್ರೇಕ್ಷಕ ಈಗ ಕುಟುಂಬದೊಳಗಿನ ಸಾಮರಸ್ಯ, ಮೌಲ್ಯಗಳು, ಸಹಜವಾಗಿ ಬರುವ ಕಾಮಿಡಿ ಆಸ್ವಾದನೆಯನ್ನೇ ಇಷ್ಟಪಡಲು ಶುರು ಮಾಡಿದ್ದಾನೆ. ಫ್ಯಾಮಿಲಿ ಎಂಟರ್‌ಟೇನರ್‌ನಲ್ಲಿ ಸಹಜವಾಗಿ ಕಾಣುವ ಸನ್ನಿವೇಶಗಳು, ಏಕತಾನತೆಯ ವೈಲೆನ್ಸ್ ಸಿನಿಮಾಗಳಲ್ಲಿ ಸಿಗೋದಿಲ್ಲ ಅನ್ನೋದು ಅವರ ವಾದ.

**ಹಿಂಸೆಗೆ ಪರ್ಯಾಯವಾಗಿ ನಿಂತ ಬೆಥ್ಲೆಹೆಮ್ ಕುಟುಂಬ ಯೂನಿಟ್**

ಇತ್ತೀಚೆಗೆ ಮಲಯಾಳಂನಲ್ಲಿ ಬಿಡುಗಡೆಯಾಗಿ ಈಗ ತಮಿಳಿಗೆ ಡಬ್ ಆಗಿ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿರುವ ಬೆಥ್ಲೆಹೆಮ್ ಕುಟುಂಬ ಯೂನಿಟ್ ಚಿತ್ರವು ಸರಳ ಕಥಾಹಂದರದಿಂದಲೇ ಪ್ರೇಕ್ಷಕರ ಹೃದಯ ಗೆದ್ದಿದೆ. ಕ್ಯಾಥೋಲಿಕ್ ನೆರೆಹೊರೆಯ ಕಮಿಟಿಯ ತಮಾಷೆಯ ಘಟನೆಗಳು, ತಿಳಿಹಾಸ್ಯ ಹಾಗೂ ಪ್ರೇಮಕಥೆಯನ್ನು ಹೊಂದಿರುವ ಈ ಚಿತ್ರಕ್ಕೆ ಪ್ರಮುಖ ಬುಕಿಂಗ್ ಪ್ಲಾಟ್‌ಫಾರ್ಮ್‌ಗಳಲ್ಲಿ 9.5 ರೇಟಿಂಗ್ ಲಭಿಸಿದ್ದು, ಟಿಕೆಟ್‌ಗಳು ಭಾರಿ ಪ್ರಮಾಣದಲ್ಲಿ ಬುಕ್ ಆಗುತ್ತಿವೆ. ಈ ಚಿತ್ರದ ಮೂಲಕ ನಟಿ ಮಮಿತಾ ಬೈಜು ಅವರು 2026ರಲ್ಲಿ ಸಾಲಾಗಿ ಮೂರು 200 ಕೋಟಿ ರೂಪಾಯಿ ಜಾಗತಿಕ ಗಳಿಕೆ ಕಂಡ ಚಿತ್ರಗಳಲ್ಲಿ ನಟಿಸಿ ಹ್ಯಾಟ್ರಿಕ್ ಸಾಧನೆ ಮಾಡಿದ ಏಕೈಕ ಭಾರತೀಯ ನಟಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

**ನೀಮ್ ಕರೋಲಿ ಬಾಬಾ ಕಥೆ ಹೇಳುವ ಹನುಮಾನ್ ಅಂಶ**

ನೀಮ್ ಕರೋಲಿ ಬಾಬಾ ಅವರ ಆಧ್ಯಾತ್ಮಿಕ ಜೀವನ ಮತ್ತು ಪ್ರೀತಿ-ಶ್ರದ್ಧೆಯ ಮೌಲ್ಯಗಳನ್ನು ಸಾರುವ ಹನುಮಾನ್ ಅಂಶ ಚಿತ್ರವು ಭಾರತೀಯ ಸಿನಿರಂಗದ ಇತಿಹಾಸದಲ್ಲೇ ಅತ್ಯಂತ ಹೆಚ್ಚು ಲಾಭ ತಂದುಕೊಟ್ಟ ಆಧ್ಯಾತ್ಮಿಕ ಕಥಾಹಂದರದ ಚಿತ್ರವಾಗಿ ಹೊರಹೊಮ್ಮಿದೆ. ಕೇವಲ 2 ಕೋಟಿ ರೂಪಾಯಿಗಳ ಸಣ್ಣ ಬಜೆಟ್‌ನಲ್ಲಿ ರೂಪುಗೊಂಡ ಈ ಸಿನಿಮಾ, ಯಾವುದೇ ಭಾರಿ ಪ್ರಚಾರವಿಲ್ಲದೆ ಬಿಡುಗಡೆಯಾಗಿ, ಪ್ರೇಕ್ಷಕರ ವಾಕ್-ಪ್ರಚಾರದಿಂದಾಗಿ ಶೇಕಡಾ 2000ಕ್ಕೂ ಹೆಚ್ಚು ಲಾಭ ಗಳಿಸಿ ಸಂಚಲನ ಸೃಷ್ಟಿಸಿದೆ. ಜನರಿಗೆ ವೈಲೆನ್ಸ್ ಬೇಡವಾಗಿದೆ ಎಂಬುದಕ್ಕೂ ಸಾಕ್ಷಿಯಾಗಿದೆ, ಭಾರಿ ಪ್ರಚಾರದೊಂದಿಗೆ ಬಂದಿದ್ದ ಟಾಕ್ಸಿಕ್ ನಂತಹ ದೊಡ್ಡ ಹಿಂಸಾತ್ಮಕ ಆಕ್ಷನ್ ಸಿನಿಮಾಗಳ ಪ್ರದರ್ಶನ ಶೋಗಳನ್ನು ರದ್ದುಗೊಳಿಸಿ, ಆ ಥಿಯೇಟರ್ ಶೋಗಳನ್ನು ಹನುಮಾನ್ ಅಂಶು ಮತ್ತು ಬೆಥ್ಲೆಹೆಮ್ ಕುಟುಂಬ ಯೂನಿಟ್ ಚಿತ್ರಗಳಿಗೆ ವರ್ಗಾಯಿಸಿರುವುದು ಈ ವರ್ಷದ ದೊಡ್ಡ ಬದಲಾವಣೆ.

ಧುರಂಧರ್ ದಿ ರಿವೆಂಜ್ ದೇಶಭಕ್ತಿಯ ಕಥೆಯ ಮೂಲಕ ಗಮನಸೆಳೆದು ಜಾಗತಿಕವಾಗಿ ಸುಮಾರು 1852 ಕೋಟಿ ರೂಪಾಯಿಗಳಿಗೂ ಅಧಿಕ ಗಳಿಕೆ ಕಾಣುವ ಮೂಲಕ 2026ರ ಅತ್ಯಂತ ಹೆಚ್ಚು ಕಲೆಕ್ಷನ್ ಮಾಡಿದ ಭಾರತೀಯ ಸಿನಿಮಾ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಆಕ್ಷನ್ ಶೈಲಿಯಾಗಿದ್ದರೂ ಬಲವಾದ ಭಾವನಾತ್ಮಕ ನಿರೂಪಣೆ ಇದಕ್ಕೆ ನೆರವಾಗಿದೆ. ಅದು ಬಿಟ್ಟರೆ ಒಂದಿಷ್ಟು ಬಿಗ್ ಬಜೆಟ್ ಸಿನಿಮಾಗಳು ರಿಲೀಸ್ ಆಗಿ ಹವಾ ಎಬ್ಬಿಸಿದರೂ ಪ್ರೇಕ್ಷಕರು ಅದನ್ನು ಕೈ ಹಿಡಿದಿಲ್ಲ. ಅಂಕಿ ಅಂಶಗಳಲ್ಲಿ ಅಷ್ಟು ಕೋಟಿ, ಇಷ್ಟು ಕೋಟಿ ಅಂತ ಲೆಕ್ಕಾಚಾರಗಳು ಸಿಗಬಹುದು, ಒಂದಿಷ್ಟು ಪಬ್ಲಿಸಿಟಿ ಸ್ಟಂಟ್‌ಗಳೂ ಆಗಿರಬಹುದು, ಆದರೆ ಜನಸಾಮಾನ್ಯನಂತೂ ಅವುಗಳನ್ನು ತಿರಸ್ಕರಿಸಿದ್ದಾನೆ. ಬದಲಿಗೆ ಸದಭಿರುಚಿಯ ಹೊಸತನದ ಕಥೆಗಳಿಗೆ ಕವಿ ಕಣ್ಣು ನೆಟ್ಟು ಕೂತಿದ್ದಾನೆ.



# ಮುಂಬೈ-ಗೋವಾ ಹೆದ್ದಾರಿ ಉದ್ಘಾಟನೆಗೆ ಬರಲ್ಲ

## 15 ವರ್ಷದಿಂದ ನಿಧಾನಗತಿ ಕೆಲಸ | ಸಚಿವ ಗಡ್ಕರಿ ಕೆಂಡಾಮಂಡಲ

• ಪ್ರಜೋದಯ ವರದಿ



**ಗೋವಾ:** ಮುಂಬೈ ಮತ್ತು ಗೋವಾ ಹೆದ್ದಾರಿ ವಿಸ್ತರಣೆಯ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿರುವುದಕ್ಕೆ ಕೇಂದ್ರ ಭೂ ಹೆದ್ದಾರಿ ಖಾತೆಯ ಸಚಿವ ನಿತಿನ್ ಗಡ್ಕರಿ ಗರಂ ಆಗಿದ್ದು, ರಸ್ತೆ ಸಿದ್ಧವಾದ ಮೇಲೆ ಉದ್ಘಾಟನೆಗೆ ಬರುವುದಿಲ್ಲ ಎಂದು ತಮ್ಮದೇ ಇಲಾಖೆಯ ವಿರುದ್ಧ ಗುಡುಗಿದ್ದಾರೆ.

ಮುಂಬೈ-ಗೋವಾ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆ ಕಾಮಗಾರಿ ನಿರಂತರ ವಿಳಂಬ ವಾಗುತ್ತಿದೆ. ಅದರಿಂದ ಇಲಾಖೆ ತಲೆ ತಗ್ಗಿಸು ವಂತಾಗಿದೆ. ವೈಯಕ್ತಿಕವಾಗಿ ನನಗೂ ನಾಚಿಕೆ ಯಾಗುತ್ತಿದೆ. ಈ ಯೋಜನೆ ಅಂತಿಮವಾಗಿ ಪೂರ್ಣಗೊಂಡ ನಂತರ ಅದರ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವುದಿಲ್ಲ ಎಂದು ಅವರು ಹೇಳಿದ್ದಾರೆ.

**ಎಲಿವೇಟೆಡ್ ಕಾರಿಡಾರ್ ಉದ್ಘಾಟನೆ:**

ಮುಂದಿನ ತಿಂಗಳು ಮತ್ತೆ ಬಂದು ಕಾಮಗಾರಿಯನ್ನು ಪರಿಶೀಲಿಸುತ್ತೇನೆ, ಕಳಪೆ ಮಟ್ಟದ ಕೆಲಸವನ್ನು ಮಾಡಿರುವ ಗುತ್ತಿಗೆದಾರರು ಮತ್ತು ಅಧಿಕಾರಿಗಳು ಕೈಜೋಡಿಸಿದ್ದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ನಿತಿನ್ ಗಡ್ಕರಿ ಎಚ್ಚರಿಸಿದ್ದಾರೆ. ಪಣಜಿಯ ಬಳಿಯ ಪೋರ್ವೋರಿಂನಲ್ಲಿ ಆರು ಪಥಗಳ ಎಲಿವೇಟೆಡ್ ರಸ್ತೆ ಕಾರಿಡಾರ್ ಉದ್ಘಾಟಿಸಿ ನಿತಿನ್ ಗಡ್ಕರಿ ಮಾತನಾಡಿದರು. ಹೆದ್ದಾರಿ ಕಾಮಗಾರಿ ನಿರೀಕ್ಷಿತ ವೇಗದಲ್ಲಿ ಸಾಗುತ್ತಿಲ್ಲವೆಂದು ಹೇಳಿದ್ದಾರೆ.

ಮುಂಬೈ ಗೋವಾ ರಸ್ತೆ ಅಗಲೀಕರಣದ ಉದ್ಘಾಟನೆಗೆ ಬರುವುದಿಲ್ಲ ಎಂದು ಹಿಂದೆಯೇ ಹೇಳಿದ್ದೆ. ಏಕೆಂದರೆ ಇಷ್ಟೊಂದು ವಿಳಂಬವಾಗಿ ರುವುದರಿಂದ ನನಗೆ ನಾಚಿಕೆಯಾಗುತ್ತಿದೆ. ಅಧಿಕಾರಿಗಳ ಜೊತೆ ಕಳೆದ ಮಂಗಳವಾರ ಮಾತು ಕತೆ ನಡೆಸಿದ್ದೇನೆ, ಮತ್ತೆ ಅಕ್ಟೋಬರ್‌ನಲ್ಲಿ ಪರಿಶೀಲನೆಗೆ ಬರುವುದಾಗಿ ಗಡ್ಕರಿ ಅವರು ಎಚ್ಚರಿಕೆಯನ್ನೂ ನೀಡಿದ್ದಾರೆ.

ಮುಂದಿನ ತಿಂಗಳು ಮುಂಬೈ ವಿಮಾನ ನಿಲ್ದಾಣದಿಂದ ಗೋವಾದ ವರೆಗೆ ರಸ್ತೆ ಮಾರ್ಗದಲ್ಲೇ ಪ್ರಯಾಣಿಸಿ ಖುದ್ದು ಹೆದ್ದಾರಿ ಪರಿಶೀಲಿಸುತ್ತೇನೆ. ಈ ರಸ್ತೆಯಲ್ಲಿನ ಪ್ರಯಾಣವು ಪ್ರಯಾಣಿಕರಿಗೆ ಸುಗಮವಾಗಿದೆಯಾ ಎಂದು ಮೌಲ್ಯಮಾಪನ ಮಾಡಿ ನಂತರ ಲೋಕಾರ್ಪಣೆ ಮಾಡಲಾಗುವುದು ಎಂದು ನಿತಿನ್ ಗಡ್ಕರಿ ಹೇಳಿದ್ದಾರೆ.

ಮೂಲಸೌಕರ್ಯ ಯೋಜನೆಗಳ ವಿಳಂಬ ಮತ್ತು ಕಳಪೆ ಕಾಮಗಾರಿಗೆ ಕಾರಣರಾದ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು. ಅಧಿಕಾರಿಗಳ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು. ಅಧಿಕಾರಿಗಳನ್ನು ಅಮಾನತು ಮಾಡುವ ವಿಚಾರದಲ್ಲಿ ದಾಖಲೆಯಾದರೂ ನನಗೆ ಚಿಂತೆಯಿಲ್ಲ ಎಂದು ಕೇಂದ್ರ ಭೂಹೆದ್ದಾರಿ ಖಾತೆಯ ಸಚಿವ ನಿತಿನ್ ಗಡ್ಕರಿ ಅವರು ಅಭಿಪ್ರಾಯಪಟ್ಟಿದ್ದಾರೆ.

440 ಕಿ.ಮೀ. ಉದ್ದದ ಮುಂಬೈ-ಗೋವಾ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿ ವರ್ಷದಿಂದ ನಡೆಯುತ್ತಿದೆ. ಅದಕ್ಕೆ ಭಾರೀ ವೆಚ್ಚವಾಗಿದ್ದರೂ, ಸಹ ಮತ್ತೆ ಮತ್ತೆ ವಿಳಂಬ ವಾಗುತ್ತಿದೆ. ಇತ್ತೀಚೆಗೆ ಮೇಲ್ದರ್ಜೆಗೇರಿಸಲಾದ ಈ ರಸ್ತೆಯ ಕೆಲವು ಭಾಗಗಳಲ್ಲಿ ಮೊದಲ ಮುಂಗಾರು ಮಳೆಗೆ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು ಗಡ್ಕರಿಯನ್ನು ಕೆರಳಿಸಿದೆ.

# ಜಿಲ್ಲೆಯಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಸಮಿತಿ ರಚನೆ




• ಪ್ರಜೋದಯ ವರದಿ

**ಹಾಸನ:** ಸಾರ್ವಜನಿಕರ ಸಮಸ್ಯೆ ಗಳಿಗೆ ಸ್ಪಂದಿಸಲು ಜಿಲ್ಲೆಯಲ್ಲಿ ರಾಷ್ಟ್ರೀಯ ಭ್ರಷ್ಟಾಚಾರ ನಿರ್ಮೂಲನೆ ಹಾಗು ಕಾರ್ಯಾಚರಣೆ ಸಮಿತಿ ಕಾರ್ಯಾರಂಭ ಮಾಡಲಾಗಿದೆ ಎಂದು ಸಮಿತಿ ಹಾಸನ ತಾಲ್ಲೂಕು ಅಧ್ಯಕ್ಷ ದೊಡ್ಡೇಗೌಡ ಅವರು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾನವೀಯ ನೆಲೆಗಟ್ಟಿನಲ್ಲಿ ಸಾಮಾಜಿಕ ಹಾಗು ಪರಿಸರ ಸಮಸ್ಯೆಗಳನ್ನು ಪರಿಹರಿಸಲು ಆದ್ಯತೆ ನೀಡಲಾಗುವುದು. ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣ ಮಾಡುವುದು ನಮ್ಮ ಸಂಸ್ಥೆಯ ಪ್ರಮುಖ ಉದ್ದೇಶ ಎಂದರು.

ಈ ಸಂಸ್ಥೆಯು ಕೇಂದ್ರ ಸರ್ಕಾರದ ನೀತಿ ಆಯೋಗದ ಅಡಿಯಲ್ಲಿ ಕೆಲಸ ಮಾಡಲಿದೆ. ಸಮಾಜಮುಖಿ ಕೆಲಸಗಳನ್ನು ಸ್ವಯಂ ಸೇವಕರಾಗಿ ಕೆಲಸ ಮಾಡುವ ಕಾರ್ಯಕರ್ತರನ್ನು ಗೌರವಿಸುವುದು ನಮ್ಮ ಕರ್ತವ್ಯ. ಈಗಾಗಲೇ ಜಿಲ್ಲೆ ಚನ್ನರಾಯಪಟ್ಟಣ,ಹಾಸನ, ಅರಕಲಗೂಡು ತಾಲ್ಲೂಕುಗಳಲ್ಲಿ ಸಮಿತಿ ರಚಿಸಲಾಗಿದೆ. ನಾಗರಿಕರು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರಿಗೆ ಆಗುವ ವಿಳಂಬ ಹಾಗು ಪ್ರಕರಣ ಇದ್ದಲ್ಲಿ ಸಮಿತಿಯ ಗಮನಕ್ಕೆ ತಂದರೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.

ಪ್ರಧಾನ ಕಾರ್ಯದರ್ಶಿ ಚಂದ್ರೇಗೌಡ, ಅರಕಲಗೂಡು ತಾಲೂಕು ಅಧ್ಯಕ್ಷ ಸುಬ್ಬರಾವ್, ಪ್ರಧಾನ ಕಾರ್ಯದರ್ಶಿ ರಮೇಶ್ ವಾಟಾಳ್, ಕಾರ್ಯಾಧ್ಯಕ್ಷ ಹೊನ್ನೇಗೌಡ ಇದ್ದರು.

# ಸೆ.13 ರಂದು ನೂತನ ಸಚಿವರಿಗೆ ಅಭಿನಂದನೆ

• ಪ್ರಜೋದಯ ವರದಿ



## ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ

**ಅರಸೀಕೆರೆ:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿರುವ ಕೆ.ಎಂ.ಶಿವಲಿಂಗೇಗೌಡ, ಕೆ.ಎಚ್. ಮುನಿಯಪ್ಪ ಹಾಗೂ ಕೆ.ಎಸ್.ಬಸಂತಪ್ಪ ಅವರಿಗೆ ತಾಲ್ಲೂಕು ಮಾದಿಗ ಸಂಘಟನೆಗಳ ಒಕ್ಕೂಟದ ವತಿಯಿಂದ ಅಭಿನಂದನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಹಾರನಹಳ್ಳಿ ಶಿವಮೂರ್ತಿ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಆದಿ ಜಾಂಬವ ಸಮುದಾಯ ಭವನದಲ್ಲಿ ಸೆ.13 ರಂದು ಬೆಳಿಗ್ಗೆ 10.30 ಕ್ಕೆ ನಡೆಯಲಿದ್ದು, ಹಾರನಹಳ್ಳಿ ಕೋಡಿ ಮಠದ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮೀಜಿ ಹಾಗೂ ಹಿರಿಯೂರು ಕೋಡಿಹಳ್ಳಿ ಬೃಹನ್ಮಠದ ಷಡಕ್ಷರಿ ಮುನಿ ಮಹಾಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಸಮಾರಂಭದಲ್ಲಿ ಮಾಜಿ ಸಚಿವ ಎಚ್. ಆಂಜನೇಯ, ಕೇಂದ್ರ ಮಾಜಿ ಸಚಿವ ಎ.ನಾರಾಯಣ ಸ್ವಾಮಿ ಸೇರಿದಂತೆ ಜಿಲ್ಲೆ ಹಾಗೂ ತಾಲ್ಲೂಕಿನ ಸಮಾಜದ ಮುಖಂಡರು ಪಾಲ್ಗೊಳ್ಳಲಿದ್ದು, ಸಮಾರಂಭದಲ್ಲಿ ತಾಲ್ಲೂಕಿನ ಸಮಾಜ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿಕೊಡುವಂತೆ ಅವರು ಮನವಿ ಮಾಡಿದರು.

ಮಾದಿಗ ದಂಡೋರ ಮೀಸಲಾತಿ ಹೋರಾಟ ಸಮಿತಿಯ ಜಿಲ್ಲಾಧ್ಯಕ್ಷ ಎ.ಪಿ.ಚಂದ್ರಯ್ಯ ಅವರು ಮಾತನಾಡಿ, ಈಗಾಗಲೇ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿದ್ದು, ಇದೇ ಸಮಾರಂಭದಲ್ಲಿ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದೆಂದು ಹೇಳಿದರಲ್ಲದೆ, ಸಭಾ ಕಾರ್ಯಕ್ರಮದ ಬಳಿಕ ಸಾಮೂಹಿಕ ಅನ್ನಸಂತರ್ಪಣೆಯನ್ನು ಸಹ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಪರ ಸಂಘಟನೆಗಳ ಮುಖಂಡರಾದ ಎನ್.ಜಯಕುಮಾರ್, ಸಂಕೋಡನಹಳ್ಳಿ ಮಂಜುನಾಥ್, ನಾಗವೇದಿ ಕರಿಯಪ್ಪ, ಬಾಣಾವರ ಮಹೇಶ್, ಚಿಕ್ಕ ಬಾಣಾವರ ವೆಂಕಟೇಶ್, ಮಲೆ ದೇವರಹಳ್ಳಿ ಮಂಜು, ಗುರುಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

# ನಿರ್ಗತಿಕರಿಗೆ ವಾತ್ಸಲ್ಯ ಮನೆ: ಮಹಾಬಲ ಕುಲಾಲ್

• ಪ್ರಜೋದಯ ವರದಿ



**ಆಲೂರು:** ಜೀವನದಲ್ಲಿ ನೊಂದು ಮೂಲಭೂತ ಸೌಕರ್ಯಗಳಿಂದ ವಂಚಿತರಾದ ಅಸಹಾಯಕ ಪರಿಸ್ಥಿತಿಯಲ್ಲಿರುವವರಿಗೆ ವಾತ್ಸಲ್ಯ ಯೋಜನೆಯಲ್ಲಿ ವಾತ್ಸಲ್ಯ ಮನೆಯನ್ನು ನಿರ್ಮಾಣ ಮಾಡಿಕೊಡಲಾಗುವುದು ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್ ಅವರು ತಿಳಿಸಿದರು.

**ಫಲಾನುಭವಿಗಳನ್ನು ಗುರುತಿಸಿ**

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಕಂದಲಿ ವಲಯ ನಂಜೇದೇವರ ಕಾವಲು ಕಿಂಡೀಪುರ ಗ್ರಾಮದಲ್ಲಿ ವಾತ್ಸಲ್ಯ ಪಲಾನುಭವಿ ಗಿಡ್ಡಮ್ಮ ಅವರಿಗೆ ವಾತ್ಸಲ್ಯ ಕಾರ್ಯಕ್ರಮದಡಿ ವಾತ್ಸಲ್ಯ ಮನೆಯನ್ನು ಹಸ್ತಾಂತರಿಸಿ ಮಾತನಾಡಿದ ಅವರು, ಜ್ಞಾನವಿಕಾಸ ಕಾರ್ಯ ಕ್ರಮದ ಮುಖೇನ ನೆಮ್ಮದಿಯ ಜೀವನ ನಡೆಸಲು ಮಾತೃಶ್ರೀ ಅಮ್ಮನವರ ಆಶಯದಂತೆ, ವಾತ್ಸಲ್ಯ ಮನೆಯನ್ನು ನಿರ್ಮಿಸಿ, ಅವರ ಮುಂದಿನ ಜೀವನ ಸುಖ, ಶಾಂತಿ, ನೆಮ್ಮದಿಯಿಂದ ಕೂಡಿರಲಿ ಎಂದು ಅವರು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಕಚೇರಿ ಜ್ಞಾನವಿಕಾಸ ವಿಭಾಗದ ನಿರ್ದೇಶಕ ದಿನೇಶ್‌ಪೂಜಾರಿ, ಜ್ಞಾನವಿಕಾಸ ವಿಭಾಗದ ಯೋಜನಾಧಿಕಾರಿ ಮಲ್ಲಿಕಾ, ತಾಲ್ಲೂಕಿನ ಯೋಜನಾಧಿಕಾರಿ ರತ್ನಾಕರ್ ಕೊಠರಿ, ಜಿಲ್ಲಾ ಜನಜಾಗೃತಿ ಸದಸ್ಯರಾದ ಧರ್ಮರಾಜ್, ರಾಜಶೇಖರ್, ಬಾಲಕೃಷ್ಣ, ವೆಂಕಟೇಗೌಡ, ಮುರುಳಿಧರ್, ಶಕುನಿಗೌಡ, ಪುಟ್ಟರಾಜು, ಸೋಮಶೇಖರ್, ದಿನೇಶ್, ವಲಯದ ಮೇಲ್ವಿಚಾರಕ ಸುಧೀರ್, ಸಮನ್ವಯಾಧಿಕಾರಿ ಸರಸ್ವತಿ, ಒಕ್ಕೂಟದ ಪದಾಧಿಕಾರಿಗಳು, ಪ್ರಗತಿ ಬಂಧು ಸ್ವ ಸಹಾಯ ಸಂಘದ ಸದಸ್ಯರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ರಾಜ್ಯ ಒಕ್ಕಲಿಗರ ಸಂಘಕ್ಕೆ ರಘುಗೌಡ ಖಜಾಂಚಿ

• ಪ್ರಜೋದಯ ವರದಿ



**ಹಾಸನ:** ರಾಜ್ಯ ಒಕ್ಕಲಿಗರ ಸಂಘದ ನೂತನ ಖಜಾಂಚಿ ಯಾಗಿ ಎಸ್.ಎಸ್.ರಘುಗೌಡ ಹಾಗು ಪ್ರಧಾನ ಕಾರ್ಯದರ್ಶಿಯಾಗಿ ಹೆಚ್.ಎನ್. ಅಶೋಕ್ ಅವರು ಅವಿರೋಧ ಆಯ್ಕೆಯಾಗಿದ್ದಾರೆ.

ಸಿ.ಜಿ.ಗಂಗಾಧರ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸಂಘದ ಪ್ರಧಾನ ಕಾರ್ಯದರ್ಶಿ ಹಾಗು ಕೆ.ವಿ.ಶ್ರೀಧರ್ ಅವರ ರಾಜೀನಾಮೆಯಿಂದ ಖಾಲಿ ಉಳಿದಿದ್ದ ಖಜಾಂಚಿ ಸ್ಥಾನಕ್ಕೆ ಚುನಾವಣೆ ಪ್ರಕ್ರಿಯೆ ನಡೆಯಿತು. ಐದು ವರ್ಷಗಳ ಅವಧಿಯ ಸಂಘದ ಕಾರ್ಯಕಾರಿ ಸಮಿತಿಯ ಆಡಳಿತಾವಧಿಯಲ್ಲಿ ಆರನೇ ಬಾರಿಗೆ ಪದಾಧಿಕಾರಿಗಳ ಬದಲಾವಣೆ ಮಾಡಲಾಗಿದೆ. ಪ್ರಸಕ್ತ ಆಡಳಿತ ಮಂಡಳಿಯ ಅವಧಿಯು ಡಿಸೆಂಬರ್ ಅಂತ್ಯದವರೆಗೆ ಇದೆ.

2025 ರ ನವೆಂಬರ್ 23 ರಂದು ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎಲ್. ಶ್ರೀನಿವಾಸ್, ಉಪಾಧ್ಯಕ್ಷರಾಗಿ ಡಾ. ಕೆ.ವಿ. ರೇಣುಕಾ ಪ್ರಸಾದ್, ಎಂ. ಪುಟ್ಟಸ್ವಾಮಿ, ಪ್ರಧಾನ ಕಾರ್ಯದರ್ಶಿಯಾಗಿ ಸಿ.ಜಿ. ಗಂಗಾಧರ್, ಖಜಾಂಚಿಯಾಗಿ ಕೆ.ವಿ. ಶ್ರೀಧರ್, ಸಹಾಯಕ ಕಾರ್ಯದರ್ಶಿಯಾಗಿ ಡಾ.ಡಿ.ಕೆ. ರಮೇಶ್ ಅವರು ಆಯ್ಕೆಯಾಗಿದ್ದರು.

# ವೈದ್ಯಕೀಯ ಶಿಬಿರ: 300ಕ್ಕೂ ಅಧಿಕ ಜಾನುವಾರುಗಳಿಗೆ ಚಿಕಿತ್ಸೆ

• ಪ್ರಜೋದಯ ವರದಿ





**ಚಿಕ್ಕಮತಿಘಟ್ಟ:** ಚನ್ನರಾಯಪಟ್ಟಣ ತಾಲ್ಲೂಕಿನ ಚಿಕ್ಕಮತಿಘಟ್ಟ ಗ್ರಾಮದಲ್ಲಿ ಹಾಸನದ ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿ.ಎಸ್.ಸಿ. ಅಂತಿಮ ವರ್ಷದ ವಿದ್ಯಾರ್ಥಿಗಳು ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ ಹಮ್ಮಿಕೊಂಡಿದ್ದಾರೆ.

ಇದರ ಅಂಗವಾಗಿ ರೈತರ ಜಾನುವಾರುಗಳ ಆರೋಗ್ಯವನ್ನು ಕಾಪಾಡುವ ಹಾಗೂ ಅವುಗಳ ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ಪಶುವೈದ್ಯಕೀಯ ಆರೋಗ್ಯ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ ನಡೆಯಿತು.

ಶಿಬಿರದಲ್ಲಿ 300ಕ್ಕೂ ಅಧಿಕ ಜಾನುವಾರುಗಳಿಗೆ ಆರೋಗ್ಯ ತಪಾಸಣೆ ಹಾಗೂ ಅಗತ್ಯ ಚಿಕಿತ್ಸೆ ನೀಡಲಾಗಿದ್ದು, 150ಕ್ಕೂ ಹೆಚ್ಚು ರೈತರು ಇದರ ಪ್ರಯೋಜನ ಪಡೆದರು.

ಪಶು ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕ ಹಾಗು ಮುಖ್ಯಸ್ಥ ಡಾ.ಎಂ.ಶಿವಕುಮಾರ್, ಸಹ ಪ್ರಾಧ್ಯಾಪಕ ಡಾ.ಬಿ.ಪಿ.ರವಿಕುಮಾರ್, ಡಾ. ಪಿ. ರವಿಕುಮಾರ್ ಸಹ ಪ್ರಾಧ್ಯಾಪಕರು ಮತ್ತು ಕೃಷಿ ಮಹಾವಿದ್ಯಾಲಯ ಕಾರೆಕೆರೆ ಕಾಲೇಜಿನ ಡಾ.ಶಶಿಕಲಾ, ಸಂಯೋಜಕರಾದ ಡಾ.ಗುರುಮೂರ್ತಿ, ಡಾ. ಚಂದನ ಮತ್ತು ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು ಹಾಗು ಅಂತಿಮ ವರ್ಷದ ಸ್ನಾತಕ ವಿದ್ಯಾರ್ಥಿಗಳು ಜಾನುವಾರುಗಳ ಸಮಗ್ರ ಆರೋಗ್ಯ ತಪಾಸಣೆ ನಡೆಸಿ, ಅಗತ್ಯವಿರುವ ವಿವಿಧ ಲಸಿಕೆಗಳನ್ನು ನೀಡಿದರು.

ಜಾನುವಾರುಗಳಲ್ಲಿ ಕಂಡುಬಂದ ಉಣ್ಣೆ, ಹೇನು ಹಾಗೂ ಇತರೆ ಬಾಹ್ಯ ಪರೋಪಜೀವಿಗಳ ಬಾಧೆಗೆ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಆಂತರಿಕ ಪರೋಪಜೀವಿಗಳು ಮತ್ತು ಜಂತು ಬಾಧೆ ಕಂಡು ಬಂದ ಜಾನುವಾರುಗಳಿಗೆ ಸೂಕ್ತ ಜಂತುನಾಶಕ ಚಿಕಿತ್ಸೆ ಒದಗಿಸಲಾಯಿತು.

ಜಾನುವಾರುಗಳ ಸಂತಾನೋತ್ಪತ್ತಿ ಆರೋಗ್ಯಕ್ಕೂ ವಿಶೇಷ ಆದ್ಯತೆ ನೀಡಲಾಗಿದ್ದು, ಅಗತ್ಯವಿರುವ ಹಸುಗಳು ಮತ್ತು ಇತರೆ ಜಾನುವಾರುಗಳಲ್ಲಿ ಗರ್ಭಧಾರಣೆ ಪರೀಕ್ಷೆಯನ್ನು ನಡೆಸಲಾಯಿತು. ಗರ್ಭಿಣಿ ಜಾನುವಾರುಗಳ ಆರೈಕೆ, ಪೌಷ್ಟಿಕಾಂಶ, ಲಸಿಕಾಕರಣ ಮತ್ತು ಪ್ರಸವಪೂರ್ವ ನಿರ್ವಹಣೆಯ ಕುರಿತು ರೈತರಿಗೆ ಸೂಕ್ತ ಸಲಹೆಗಳನ್ನು ನೀಡಲಾಯಿತು.

ಶಿಬಿರದ ಸಂದರ್ಭದಲ್ಲಿ ರೈತರು ತಮ್ಮ ಜಾನುವಾರುಗಳ ವಿವಿಧ ಆರೋಗ್ಯ ಸಮಸ್ಯೆಗಳನ್ನು ಪಶುವೈದ್ಯಕೀಯ ತಜ್ಞರೊಂದಿಗೆ ನೇರವಾಗಿ ಚರ್ಚಿಸಿ, ಸೂಕ್ತ ಚಿಕಿತ್ಸೆ ಹಾಗೂ ನಿರ್ವಹಣಾ ಸಲಹೆಗಳನ್ನು ಪಡೆಯಲು ಅವಕಾಶ ದೊರೆಯಿತು. 300ಕ್ಕೂ ಅಧಿಕ ಜಾನುವಾರುಗಳಿಗೆ ಆರೋಗ್ಯ ಸೇವೆ ಮತ್ತು ಚಿಕಿತ್ಸೆ ನೀಡಿ, 150ಕ್ಕೂ ಹೆಚ್ಚು ರೈತರಿಗೆ ಪ್ರಯೋಜನ ಒದಗಿಸಿದ ಈ ಶಿಬಿರವು ಗ್ರಾಮೀಣ ಪ್ರದೇಶದಲ್ಲಿ ಜಾನುವಾರುಗಳ ಆರೋಗ್ಯ ಮತ್ತು ರೈತರ ಕಲ್ಯಾಣಕ್ಕೆ ಮಹತ್ವದ ಕೊಡುಗೆ ನೀಡಿತು.

ಪ್ರತಿ ವರ್ಷದಂತೆ ಈ ಬಾರಿಯೂ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಶಿಬಿರದ ಮೂಲಕ ರೈತರಿಗೆ ಅರಿವು ಮೂಡಿಸುತ್ತಿದ್ದಾರೆ.

# ರಕ್ತದಾನದಿಂದ ಮೂವರ ಜೀವ ಉಳಿಸಬಹುದು

• ಪ್ರಜೋದಯ ವರದಿ



**ಹಾಸನ:** ರಕ್ತವು ಪ್ಲಾಸ್ಮಾ, ಕೆಂಪು ರಕ್ತಕಣಗಳು, ಬಿಳಿ ರಕ್ತಕಣಗಳು ಹಾಗೂ ಪ್ಲೇಟ್ಲೆಟ್ಸ್ ಎಂಬ ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಒಬ್ಬ ವ್ಯಕ್ತಿ ರಕ್ತದಾನ ಮಾಡುವುದರಿಂದ ಮೂರು ಜೀವಗಳನ್ನು ಉಳಿಸಲು ಸಾಧ್ಯವಿದೆ ಎಂದು ರೆಡ್‌ಕ್ರಾಸ್ ಸಂಸ್ಥೆಯ ಹಾಸನದ ಸಭಾಪತಿ ಹೆಮ್ಮಿಗೆ ಮೋಹನ್ ಅವರು ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ ಹಾಸನ, ನವಕೀಸ್ ಇಂಜಿನಿಯರಿಗ್ ಕಾಲೇಜು, ಹಾಸನ, ತೇರಾಪಂಥ್ ಯುವಕ್ ಪರಿಷದ್, ಹಾಸನ ಹಾಗೂ ಹೇಮಾವತಿ ಲಯನ್ಸ್ ಕ್ಲಬ್, ಹಾಸನ ಇವರ ಸಂಯುಕ್ತ ಆಶ್ರಯದಲ್ಲಿ ಸಂಸ್ಥಾಪಕರ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ರಕ್ತದಾನ ಶಿಬಿರ ಹಾಗೂ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಇನ್ನೂ ಸುಮಾರು ಒಂದು ಮಿಲಿಯನ್ ಯೂನಿಟ್‌ಗಳಷ್ಟು ರಕ್ತದ ಕೊರತೆ ಇರುವ ಹಿನ್ನೆಲೆಯಲ್ಲಿ ಯುವಜನರು ಹಾಗೂ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ರಕ್ತದ ಕೊರತೆಯನ್ನು ನೀಗಿಸಲು ಸಹಕರಿಸಬೇಕು ಎಂದು ಕರೆ ನೀಡಿದರು.

ಶಿಬಿರದಲ್ಲಿ ಒಟ್ಟು 112 ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ಇದೇ ಸಂದರ್ಭದಲ್ಲಿ ವಿಕೇರ್ ಡೆಂಟಲ್ ಆಸ್ಪತ್ರೆ ವತಿಯಿಂದ ಉಚಿತ ದಂತ ತಪಾಸಣೆ ಹಾಗೂ ಡಾ. ಅಗರ್ವಾಲ್ ಕಣ್ಣಿನ ಆಸ್ಪತ್ರೆಯಿಂದ ನೇತ್ರ ತಪಾಸಣೆ ನಡೆಸಲಾಯಿತು.

ರಕ್ತದಾನ ಮಾಡಿದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ವತಿಯಿಂದ ಕೀ-ಚೈನ್‌ಗಳನ್ನು ಉಡುಗೊರೆಯಾಗಿ ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಮಾಸ್ಕ್‌ಗಳನ್ನು ನೀಡಲಾಯಿತು. ತೇರಾಪಂಥ್ ಯುವಕ್ ಪರಿಷದ್ ವತಿಯಿಂದ ವಿದ್ಯಾರ್ಥಿಗಳಿಗೆ ನೀರಿನ ಬಾಟಲ್‌ಗಳನ್ನು ವಿತರಿಸಲಾಯಿತು.

ನವಕೀಸ್ ಇಂಜಿನಿಯರಿಗ್ ಕಾಲೇಜಿನ ಸಿ.ಇ.ಒ. ವಿಶ್ವನಾಥ್ ಅವರು ಕಾರ್ಯಕ್ರಮ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಶಬ್ಬೀರ್ ಅಹ್ಮದ್, ಕೆ.ಟಿ.ಜಯಶ್ರೀ, ಸುಬ್ಬಸ್ವಾಮಿ, ಉದಯ್‌ಕುಮಾರ್, ಜಯಪ್ರಕಾಶ್, ಗಿರೀಶ್, ಭೀಮರಾಜ್ ಹಾಗೂ ಸುರೇಶ್, ಹೇಮಾವತಿ ಲಯನ್ಸ್ ಕ್ಲಬ್ ಅಧ್ಯಕ್ಷ ಕೆ.ಆರ್.ಮಧು, ಕಾರ್ಯದರ್ಶಿ ವಿಜಯಕುಮಾರ್, ತೇರಾಪಂಥ್ ಯುವಕ್ ಪರಿಷದ್ ಅಧ್ಯಕ್ಷ ವಿಕಾಸ್ ಕೊಠಾರಿ, ಕಾರ್ಯದರ್ಶಿ ಹರಿಹಂತ್ ಗುಲ್ಲುಗ್ಲಿಯ, ನವಕೀಸ್ ಇಂಜಿನಿಯರಿಗ್ ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕದ ಸಂಯೋಜಕ ಡಾ. ದೀಪಕ್, ರೆಡ್ ಕ್ರಾಸ್ ಜಿಲ್ಲಾ ಸಂಯೋಜಕ ಅವಿನಾಶ್, ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಹಾಜರಿದ್ದರು.

# ಧರ್ಮ ಜಾಗೃತಿ ಸಮಾವೇಶಕ್ಕೆ ಸಕಲ ಧರ್ಮೀಯರ ಸಹಕಾರ ಅಗತ್ಯ

## ಶ್ರೀ ಷ.ಬ್ರ.ಚನ್ನಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ

• ಪ್ರಜೋದಯ ವರದಿ



**ಬೇಲೂರು:** ಪಟ್ಟಣದಲ್ಲಿ ಸೆಪ್ಟೆಂಬರ್ 30 ಹಾಗೂ ಅಕ್ಟೋಬರ್ 1ರಂದು ನಡೆಯಲಿರುವ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀ 1008 ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಧರ್ಮ ಜಾಗೃತಿ ಸಮಾವೇಶವನ್ನು ಸರ್ವ ಧರ್ಮೀಯರ ಸಹಭಾಗಿತ್ವದೊಂದಿಗೆ ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ತೆಂಕಲಗೋಡು ಬೃಹನ್ಮಠ, ಯಸಳೂರಿನ ಶ್ರೀ ಷ.ಬ್ರ. ಚನ್ನಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದಲ್ಲಿ ನಡೆದ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಧರ್ಮದ ಮೂಲ ಆಶಯ ಮನುಷ್ಯನಲ್ಲಿ ಉತ್ತಮ ಸಂಸ್ಕಾರ, ಪರಸ್ಪರ ಗೌರವ, ಸಹಬಾಳ್ವೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವುದಾಗಿದೆ. ಯಾವುದೇ ಧರ್ಮವಾಗಲಿ, ಮನುಷ್ಯರಲ್ಲಿ ಶಾಂತಿ, ಪ್ರೀತಿ ಮತ್ತು ಸೌಹಾರ್ದತೆ ಬೆಳೆಸುವ ಸಂದೇಶವನ್ನು ನೀಡುತ್ತದೆ. ಆದ್ದರಿಂದ ಧರ್ಮದ ಹೆಸರಿನಲ್ಲಿ ಭೇದಭಾವಕ್ಕೆ ಅವಕಾಶ ನೀಡದೆ, ಪರಸ್ಪರ ಗೌರವದಿಂದ ಬದುಕುವ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಧರ್ಮ ಜಾಗೃತಿ ಕಾರ್ಯಕ್ರಮವು ಕೇವಲ ಒಂದು ಸಮುದಾಯಕ್ಕೆ ಸೀಮಿತವಾದ ಕಾರ್ಯಕ್ರಮವಲ್ಲ. ಬೇಲೂರಿನ ಸೌಹಾರ್ದತೆ, ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಪರಂಪರೆಯನ್ನು ಪ್ರತಿಬಿಂಬಿಸುವ ಕಾರ್ಯಕ್ರಮವಾಗಿ ಇದನ್ನು ಯಶಸ್ವಿಗೊಳಿಸುವ ಜವಾಬ್ದಾರಿ ಎಲ್ಲರದ್ದಾಗಿದೆ ಎಂದು ಹೇಳಿದರು.

ಯುವಜನರಲ್ಲಿ ಉತ್ತಮ ಚಿಂತನೆ, ಸಂಸ್ಕಾರ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸುವ ನಿಟ್ಟಿನಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆ. ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಪರಸ್ಪರ ವಿಶ್ವಾಸವನ್ನು ಮತ್ತಷ್ಟು ಬಲಪಡಿಸುವಂತಹ ವಾತಾವರಣ ನಿರ್ಮಾಣವಾಗಬೇಕು ಎಂದು ಸ್ವಾಮೀಜಿ ಆಶಿಸಿದರು.

ಸೆ.30 ರಂದು ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಇಷ್ಟಲಿಂಗ ಮಹಾಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ಅ.1ರಂದು ಧರ್ಮ ಜಾಗೃತಿ ಸಮಾವೇಶ, ಶಿವದೀಕ್ಷಾ ಕಾರ್ಯಕ್ರಮ ಹಾಗೂ ವಧುವರರ ಸಮಾವೇಶ ನಡೆಯಲಿದೆ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಸಮುದಾಯ ಭವನ, ಬೇಲೂರು ಕಾರ್ಯಕ್ರಮಕ್ಕೆ ವೇದಿಕೆಯಾಗಲಿದೆ.

ಬೇಲೂರು ತಾಲ್ಲೂಕು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು, ಸಾರ್ವಜನಿಕರು ಹಾಗೂ ವಿವಿಧ ಧರ್ಮೀಯರು ಸೌಹಾರ್ದತೆಯಿಂದ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಸ್ವಾಮೀಜಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ವೀರಶೈವ ಪುರೋಹಿತ ಟ್ರಸ್ಟ್ ನವರು ಸೇರಿದಂತೆ ವೀರಶೈವ ಮುಖಂಡರು, ಸಮುದಾಯದವರು ಸೇರಿದಂತೆ ಇನ್ನಿತರರು ಹಾಜರಿದ್ದರು.

# ನಾಳೆ ಆಲೂರಿನಲ್ಲಿ ಪ್ರಜಾಸೇವೆ ಆಂದೋಲನ

**ಆಲೂರು:** ಪ್ರತಿ ಮನೆ ಬಾಗಿಲಿಗೆ ಸರ್ಕಾರ ಎಂಬ ಘೋಷಣೆಯೊಂದಿಗೆ, ಪಾಳ್ಯ ಹೋಬಳಿ ಮಟ್ಟದ ಪ್ರಜಾಸೇವೆ ಆಂದೋಲನ ಕಾರ್ಯಕ್ರಮ ಪಾಳ್ಯ ಅಂಬೇಡ್ಕರ್ ಭವನದಲ್ಲಿ ಸೆ.12 ರಂದು ಬೆಳಗ್ಗೆ 11 ಕ್ಕೆ ಶಾಸಕ ಸಿಮೆಂಟ್ ಮಂಜು ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ತಹಸೀಲ್ದಾರ್ ಮಲ್ಲಿಕಾರ್ಜುನ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರ್ಜಿದಾರರು ಸರ್ಕಾರ ಸೂಚಿಸಿರುವ ನಮೂನೆಗಳಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು. ಅರ್ಜಿ ನಮೂನೆಗಳು ಸ್ಥಳೀಯ ಗ್ರಾಮ ಪಂಚಾಯಿತಿ ಮತ್ತು ಹೋಬಳಿ ಮಟ್ಟದ ನಾಡಕಚೇರಿ ಕೇಂದ್ರಗಳಲ್ಲಿ ದೊರಕಲಿದೆ. ತಾಲ್ಲೂಕಿನ ಎಲ್ಲ ಇಲಾಖೆ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸಾಧ್ಯವಾದಷ್ಟು ಅರ್ಜಿಗಳನ್ನು ಸ್ಥಳದಲ್ಲಿ ವಿಲೇವಾರಿ ಮಾಡಲಾಗುವುದು. ಸಾಧ್ಯವಾಗದ ಅರ್ಜಿಗಳನ್ನು ಪ್ರಜಾಸೇವೆ ನಿಯಮಾವಳಿಯಂತೆ ನಿಗಧಿತ ಆವಧಿಯೊಳಗೆ ವಿಲೇವಾರಿ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ.

## ಜಿಜಿಜೆಸಿ ಪ್ರಧಾನ ಪ್ರೌಢಶಾಲೆಯಲ್ಲಿ ಶಿಕ್ಷಕರ ದಿನಾಚರಣೆ

# ಪಾಠ ಕಲಿಸುವ ಶಿಕ್ಷಕರನ್ನು ನಿತ್ಯವೂ ಸ್ಮರಿಸಬೇಕು

• ಪ್ರಜೋದಯ ವರದಿ



**ಹಾಸನ:** ಶಿಕ್ಷಕ ವೃತ್ತಿ ಬಹಳ ಪವಿತ್ರವಾದುದು. ಅದನ್ನು ಎಲ್ಲರೂ ಗೌರವಿಸಬೇಕು. ಇಂದು ಎಲ್ಲ ರೀತಿಯ ಸರ್ವಶ್ರೇಷ್ಠ ಹುದ್ದೆಗಳಲ್ಲಿರವವರ ಮಾರ್ಗದರ್ಶಕರಾಗಿ ಅವರವರ ಶಿಕ್ಷಕರಿರುತ್ತಾರೆ. ಹಾಗೆಯೇ ಇಂದಿನ ಮಕ್ಕಳು ತಮಗೆ ನಿತ್ಯವೂ ಪಾಠ ಕಲಿಸುವ ಶಿಕ್ಷಕರನ್ನು ಸ್ಮರಿಸುವ ಸಲುವಾಗಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದು ಉಪಪ್ರಾಂಶುಪಾಲ ಮಂಜುನಾಥ್ ಅವರು ಹೇಳಿದರು.

ನಗರದ ಆರ್.ಸಿ.ರಸ್ತೆಯ ಜಿ.ಜಿ.ಜೆ.ಸಿ. (ಪ್ರಧಾನ), ಪ್ರೌಢಶಾಲಾ ವಿಭಾಗದಲ್ಲಿ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಇಂದಿನ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಯಾವುದೇ ವಿದ್ಯಾರ್ಥಿ ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಲು ಮುಂದಾದಾಗ ಆತ್ಮವಿಶ್ವಾಸ ಬಹಳ ಮುಖ್ಯ. ಆರೋಗ್ಯಕರ ಶರೀರದಲ್ಲಿ ಆರೋಗ್ಯಕರ ಮನಸ್ಸಿರುತ್ತದೆ. ವಿದ್ಯಾರ್ಥಿಗಳು ತಮ್ಮ ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು. ಆರೋಗ್ಯ ಚೆನ್ನಾಗಿದ್ದಾಗ ಮಾತ್ರ ಚೆನ್ನಾಗಿ ವ್ಯಾಸಂಗದಲ್ಲಿ ತೊಡಗಿಕೊಳ್ಳಲು ಸಾಧ್ಯ, ಆದ್ದರಿಂದ ಎಲ್ಲರೂ ಆರೋಗ್ಯದಿಂದ ಇದ್ದು, ಆತ್ಮವಿಶ್ವಾಸದಿಂದ ಓದಿ ಉತ್ತಮ ಅಂಕಗಳನ್ನು ಗಳಿಸಿ ಶಾಲೆಗೆ ಕೀರ್ತಿ ತರಬೇಕು ಎಂದು ಕಿವಿಮಾತು ಹೇಳಿದರು.

ಸಮಾಜ ವಿಜ್ಞಾನ ಶಿಕ್ಷಕ ಕೆ.ಎನ್. ಚಿದಾನಂದ ಅವರು ಮಾತನಾಡಿ, ಇಂದಿನ ಮಕ್ಕಳು ಸ್ಪರ್ಧಾತ್ಮಕ ಯುಗದಲ್ಲಿ ಬದುಕುತ್ತಿದ್ದಾರೆ. ಎ.ಐ. ತಂತ್ರಜ್ಞಾನ ಬಹಳ ಮುಂದುವರಿದಿದ್ದು, ಎಲ್ಲಾ ಕ್ಷೇತ್ರಗಳನ್ನು ಆವರಿಸಿದೆ. ಇಂದು ಮಕ್ಕಳು ಸರ್ವತೋಮುಖ ಜ್ಞಾನವನ್ನು ಪಡೆಯುವ ಮೂಲಕ ಇಂದಿನ ಆಧುನಿಕ ಪ್ರಪಂಚಕ್ಕೆ ಹೊಂದಿಕೊಳ್ಳಬೇಕು ಎಂದರು.

ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜೀವನ ವೃತ್ತಾಂತವನ್ನು ಮಕ್ಕಳಿಗೆ ತಿಳಿಸುತ್ತಾ, 1888 ರ ಸೆಪ್ಟಂಬರ್ 5 ರಂದು ಮದರಾಸಿನ ತಿರುತ್ತಣಿ ಎಂಬಲ್ಲಿ ಜನಿಸಿದ ರಾಧಾಕೃಷ್ಣನ್, ಡಾ. ರಾಜೇಂದ್ರ ಪ್ರಸಾದ್‌ರ ನಂತರ, 1962ರಲ್ಲಿ ಭಾರತದ ಎರಡನೇ ರಾಷ್ಟ್ರಪತಿಯಾಗಿ ಆಯ್ಕೆಯಾಗಿ, ತಮ್ಮ ಅಧಿಕಾರಾವಧಿಯಲ್ಲಿ ರಾಷ್ಟ್ರದ ಸರ್ವತೋಮುಖ ಏಳಿಗೆಗೆ ಅವಿರತವಾಗಿ ಶ್ರಮಿಸಿದರು. ಆಗ ಭಾರತ ದೇಶ ಅಂತಾರಾಷ್ಟ್ರೀಯ ಮಟ್ಟದಲ್ಲಿ ಎತ್ತರಕ್ಕೇರಿತು. ತಮ್ಮ ರಾಷ್ಟ್ರಪತಿ ಹುದ್ದೆಯ ಅಧಿಕಾರಾವಧಿ ಮುಗಿದ ನಂತರ 1967ರಲ್ಲಿ ತಮ್ಮ ನಿವೃತ್ತಿ ಜೀವನವನ್ನು ಮದ್ರಾಸಿನಲ್ಲಿ ಕಳೆದ ರಾಧಾಕೃಷ್ಣನ್ ಅವರು 1975ರ ಏಪ್ರಿಲ್ 17 ರಂದು ಪಂಚಭೂತಗಳಲ್ಲಿ ಲೀನರಾದರು. ತಮ್ಮ ಜನ್ಮ ದಿನವನ್ನು ಶಿಕ್ಷಕ ಸಮೂಹಕ್ಕೆ ಮೀಸಲಿಟ್ಟ ಚಿರಧ್ರುವ ತಾರೆ, ಮಹಾನ್ ಆದರ್ಶ ಶಿಕ್ಷಕರಾದ ಅವರ ಜೀವನಾದರ್ಶಗಳನ್ನು ನಾವು ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದರು.

ಸಂಗೀತ ಶಿಕ್ಷಕ ಸತ್ಯನಾರಾಯಣ ಮುರಳಿ ಅವರು ಮಾತನಾಡಿ, ಗುರು ಸದಾ ಪೂಜ್ಯನಾಗಿದ್ದು, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯೇ ತನ್ನ ಜೀವನದ ಪರಮ ಉದ್ದೇಶವಾಗಿರುತ್ತವೆ. ಅಂತಹ ಗುರುವನ್ನು ನಿತ್ಯವೂ ನೆನೆಯುವ ಮೂಲಕ ಪ್ರತಿ ವಿದ್ಯಾರ್ಥಿಯೂ ಗುರು ಕೃಪೆಗೆ ಪಾತ್ರರಾಗಬೇಕು ಎಂದರು.

ಕನ್ನಡ ಭಾಷಾ ಶಿಕ್ಷಕ ರುದ್ರೇಶ್ ಅವರು ಮಾತನಾಡಿ, ಇಂದಿನ ಮಕ್ಕಳು ತಮ್ಮ ತಂದೆ ತಾಯಿ, ಗುರು ಹಿರಿಯರನ್ನು ಗೌರವಿಸುವ ಸಂಸ್ಕೃತಿ ಕಲಿಯಬೇಕಿದೆ. ಒಳ್ಳೆಯದನ್ನು ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ವಿಜ್ಞಾನ ಶಿಕ್ಷಕ ಪಿ.ಮಧು ಅವರು ಮಾತನಾಡಿ ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕತೆಯ ಗುಣವನ್ನು ಬೆಳೆಸಿಕೊಳ್ಳಬೇಕು. ವಿದ್ಯೆ ಕಲಿಸಿದ ಗುರುಗಳನ್ನು ಸದಾ ಸ್ಮರಿಸಬೇಕು. ಸಕಾರಾತ್ಮಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿನಿಯರಾದ ನೂರ್ ಫಾತೀಮಾ, ಮೇಘ ಕಾರ್ಯಕ್ರಮ ನಿರೂಪಿಸಿದರೆ, ಸಮೀನಾ ಅವರು ಸ್ವಾಗತಿಸಿದರು. ಶಿಕ್ಷಕರಾದ ಎ.ವಿ.ಗೀತಾರಾಣಿ, ಎಂ.ಆರ್.ರಂಗಾಮಣಿ, ಎಸ್.ಕೆ. ಪೂರ್ಣಿಮಾ, ತೈಬಾ ಕೌಸರ್, ಚಿದಾನಂದ, ಅಹಲ್ಯ, ಬಿ.ಇಡಿ. ಪ್ರಶಿಕ್ಷಣಾರ್ಥಿಗಳು, ಬೋಧಕೇತರ ಸಿಬ್ಬಂದಿ ಹಾಜರಿದ್ದರು.

# ದಿಡಗದಲ್ಲಿ ಗಾಂಧಿ ಶಿಬಿರಾರ್ಥಿಗಳ ಶ್ರಮದಾನ

## ಪುರಾತನ ಬಲ್ಲೇಶ್ವರ ದೇವಾಲಯದಲ್ಲಿ ಸ್ವಚ್ಛತಾ ಕಾರ್ಯ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ತಾಲ್ಲೂಕಿನ ದಿಡಗ ಗ್ರಾಮದಲ್ಲಿ ನಡೆಯುತ್ತಿರುವ ರಾಜ್ಯಮಟ್ಟದ ಗಾಂಧಿ ತತ್ವ ಪರಿಣಿತ ಯುವಜನ ಶಿಬಿರದ ವಿದ್ಯಾರ್ಥಿಗಳು, ಗ್ರಾಮದಲ್ಲಿರುವ ಪಾಳು ಬಿದ್ದ ಪುರಾತನ ಬಲ್ಲೇಶ್ವರ ದೇವಾಲಯದಲ್ಲಿ ಶ್ರಮದಾನದ ಮೂಲಕ ಸ್ವಚ್ಛತಾ ಕಾರ್ಯ ನಡೆಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಬೆಂಗಳೂರು, ಎನ್‌ಎಸ್‌ಎಸ್, ಯುವ ಸಬಲೀಕರಣ ಇಲಾಖೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು ದಿಡಗ ಇವರ ಸಂಯುಕ್ತ ಆಶ್ರಯದಲ್ಲಿ ಸೆ. 5 ರಿಂದ 11 ರವರೆಗೆ ಈ ಶಿಬಿರ ನಡೆಯುತ್ತಿದೆ.

**800 ವರ್ಷದ ಇತಿಹಾಸ:**

ಶ್ರಮದಾನ ಮಾಡಿದ ಈ ದೇವಾಲಯಕ್ಕೆ 800 ವರ್ಷಗಳ ಇತಿಹಾಸವಿದೆ. ದೇವಾಲಯದ ಎದುರಿನ ಶಿಲಾಶಾಸನದ ಪ್ರಕಾರ ಇದು ಹೊಯ್ಸಳ 2ನೇ ವೀರ ಬಲ್ಲಾಳನ ಕಾಲದ್ದು, ಅಂದರೆ ಕ್ರಿ.ಶ. 1206ರದ್ದು. ಆಗ ಇದನ್ನು 'ಬಲ್ಲೇಶ್ವರ ದೇವಾಲಯ' ಎಂದು ಕರೆಯುತ್ತಿದ್ದರು. ದಿಡಗವು ಆಗ 'ಕಳ್ಕನಿ ನಾಡಿನ ದಿಡುಗಿನ ವೃತ್ತಿ' ಎಂಬ ಆಡಳಿತ ಕೇಂದ್ರವಾಗಿತ್ತು. ವಿಶ್ವಾಮಿತ್ರ ಗೋತ್ರದ ಎಡವ ಜಕ್ಕಯ್ಯ ಎಂಬುವವನು ತನ್ನ ತಂದೆ- ತಾಯಿ ಪುಣ್ಯಕ್ಕಾಗಿ 21 ಗದ್ಯಾಣ ಮತ್ತು ಭತ್ತದ ಗದ್ದೆಗಳನ್ನು ದಾನ ನೀಡಿದ್ದಾಗಿ ಶಾಸನದಲ್ಲಿ ಇದೆ.

ಗರ್ಭಗುಡಿಯಲ್ಲಿ ಕಪ್ಪು ಶಿಲೆಯ ಶಿವಲಿಂಗ, ಹೊಯ್ಸಳರ ತಿರುಗು ಕಂಬಗಳು ಮತ್ತು ಬಾಗಿಲ ಮೇಲಿನ ಲಲಾಟದಲ್ಲಿ 'ಶ್ರೀ ಲಕ್ಷ್ಮಿ ನರಸಿಂಹ' ಕೆತ್ತನೆ ಇದರ ವಿಶೇಷ. ಕಾಲನ ವಶಕ್ಕೆ ಸಿಕ್ಕಿ ನಲುಗಿರುವ ಈ ದೇವಾಲಯದ ಆವರಣ, ಮೆಟ್ಟಿಲುಗಳ ತುಂಬಿದ್ದ ಗಿಡ-ಗಂಟಿಗಳನ್ನು ತೆಗೆದು ವಿದ್ಯಾರ್ಥಿಗಳು ಸ್ವಚ್ಛಗೊಳಿಸಿದರು. 'ಸ್ಮಾರಕ ಉಳಿದರೆ ಇತಿಹಾಸ ಉಳಿದಂತೆ' ಎಂಬ ಧ್ಯೇಯದೊಂದಿಗೆ ಈ ಕಾರ್ಯ ಮಾಡಿದರು.

ಈ ಸಂದರ್ಭದಲ್ಲಿ ಶಿಬಿರಾರ್ಥಿ ಹಾರನಹಳ್ಳಿ ಚಿನ್ಮಯ ಭಾರದ್ವಾಜ್ ಅವರು ಮಾತನಾಡಿ, ನಮ್ಮ ನಾಡಿನ ಇತಿಹಾಸ ತಿಳಿಸುವುದು ಶಿಲಾಶಾಸನ, ಪುರಾತನ ದೇವ ಮಂದಿರಗಳು. ಆದರೆ ಹೊಯ್ಸಳ ಕಾಲದ ದೇವಾಲಯ ಪಾಳು ಬಿದ್ದಿದೆ. ಸುಂದರ ಶಿವಲಿಂಗವಿದೆ. ನಮ್ಮ ತಂಡದ ಶಿಬಿರಾರ್ಥಿಗಳು ಶ್ರಮದಾನ ಮಾಡಿ ಸ್ವಚ್ಛತಾ ಕಾರ್ಯ ಮಾಡಿದ್ದೇವೆ. ಈ ದೇವಾಲಯವನ್ನು ಸಂರಕ್ಷಣೆ ಮಾಡಿ ಹೊಯ್ಸಳ ಕಾಲದ ದೇಗುಲ ಉಳಿಸಿ ಬೆಳೆಸುವ ಕೆಲಸವಾಗಲಿ' ಎಂದು ಅವರು ಹೇಳಿದರು.

ಪುರಾತತ್ವ ಇಲಾಖೆಯವರು ಕೂಡಲೇ ಇದನ್ನು ಸಂರಕ್ಷಿತ ಸ್ಮಾರಕ ಎಂದು ಘೋಷಿಸಿ ಜೀರ್ಣೋದ್ಧಾರ ಮಾಡಬೇಕು ಎಂದು ಶಿಬಿರಾರ್ಥಿಗಳು ಮತ್ತು ಗ್ರಾಮಸ್ಥರು ಮನವಿ ಮಾಡಿದ್ದಾರೆ.

# ಪಿಎಚ್‌ಡಿ ಪದವಿ



**ಬೇಲೂರು:** ತಾಲ್ಲೂಕಿನ ಅರೇಹಳ್ಳಿ ಪಟ್ಟಣದ ಮೇಲನಹಳ್ಳಿ ಬೀದಿ ನಿವಾಸಿ ಸೈಯ್ಯದ್ ರಿಯಾಜ್ ಪಾಷಾ ಅವರಿಗೆ ದಾವಣಗೆರೆ ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ.

ಡಾ.ಎಸ್.ಆರ್.ಪ್ರಕಾಶ್ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ **ಕಲ್ಚರಲ್ ಅಡ್ಜಸ್ಟ್‌ಮೆಂಟ್ ಅಮಾಂಗ್ ದ ಮೈಗ್ರೆಂಟ್ ಲೇಬರರ್ಸ್: ಎ ಸೋಷಿಯಲಾಜಿಕಲ್ ಸ್ಟಡಿ** ಎಂಬ ಸಂಶೋಧನಾ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಲಭಿಸಿದೆ.

CHANGE OF NAME

I,YASMEEN BANU W/O ASHWAK AHMEDaged about 46 years,Residing at near Durgamma Temple,VallabaiRoad,HassanDistrict, Karnataka-573201.I Hereby that my son name Changed from MOHAMMAD SAFAN to MOHAMMED SAFAN for all the purposes.This information is true and accurate.Vide affidavit dated 18/08/26 swaron before notary P.Nanjappa at Hassan

## ಸಮರ್ಪಕ ಸಾರಿಗೆ ವ್ಯವಸ್ಥೆಗಾಗಿ ಬಸ್ ತಡೆದ ವಿದ್ಯಾರ್ಥಿಗಳು

» ಮೊದಲನೇ ಪುಟದಿಂದ

ಸಾಹಸದ ಕೆಲಸ. ಹಾಗಿದ್ದರೂ ಜೀವ ಪಣಕ್ಕಿಟ್ಟು ಬಸ್‌ಗಾಗಿ ಕಾದು ನಿಂತಿರುತ್ತೇವೆ. ಆದರೆ, ನಿಲ್ಲಲು ಜಾಗವಿಲ್ಲದಷ್ಟು ತುಂಬಿದರೆ ಏನು ಮಾಡುವುದು. ನಲ್ಲೂರು-ಮಗ್ಗೆ ಮಾರ್ಗದ ಬಸ್‌ಗೆ ಆ ವ್ಯಾಪ್ತಿಯ ಮಕ್ಕಳಷ್ಟೇ ಹತ್ತಬೇಕು. ಆ ನಿಟ್ಟಿನಲ್ಲಿ ಅಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಬೆಳಿಗ್ಗೆ 8 ರಿಂದ 10 ಗಂಟೆ ವರೆಗೆ ಬಸ್ ನಿಲ್ಲಿಸಿದ್ದರಿಂದ ಸಂಚಾರದಲ್ಲಿ ಭಾರೀ ವ್ಯತ್ಯಯವಾಯಿತು. ಇತರ ಪ್ರಯಾಣಿಕರು ತೊಂದರೆ ಅನುಭವಿಸಿದರು. ಬಸ್ ಚಾಲಕ ಮತ್ತು ನಿರ್ವಾಹಕ ಎಷ್ಟೇ ಮನವೊಲಿಸಲು ಪ್ರಯತ್ನಿಸಿದರೂ ವಿದ್ಯಾರ್ಥಿಗಳು ಸುಮ್ಮನಾಗಲಿಲ್ಲ. ಕೆಎಸ್‌ಆರ್‌ಟಿಸಿ ಅಧಿಕಾರಿಗಳು ದೂರವಾಣಿ ಕರೆ ಮೂಲಕ ಸಂಪರ್ಕಿಸಿ ಸಮಸ್ಯೆಗೆ ಪರಿಹಾರ ಕಲ್ಪಿಸುವ ಭರವಸೆ ನೀಡಿದ ಬಳಿಕ ಬಸ್ ಹೊರಡಲು ಅನುವು ಮಾಡಿಕೊಟ್ಟರು. ಆದರೆ, ಆಲೂರು ಪಟ್ಟಣಕ್ಕೆ ಬರುತ್ತಿದ್ದಂತೆ ಮತ್ತೊಂದು ಗುಂಪು ಬಸ್ ತಡೆದು ಪ್ರತಿಭಟನೆ ನಡೆಸಿತು. ಎಲ್ಲಾ ಅಡೆತಡೆಗಳನ್ನು ಮೀರಿ ಬಸ್ ಬೆಳಿಗ್ಗೆ 11 ಗಂಟೆಗೆ ಹಾಸನ ತಲುಪಿತು.

## ಇಂದು ಕ.ರಾ.ವಿ ಯೋಜನೆ-ಅಭಿವೃದ್ಧಿ ಸಮಿತಿ ಉಪಾಧ್ಯಕ್ಷರ ಪ್ರವಾಸ

**ಹಾಸನ :** ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ ಅವರು ಸೆ.11 ರಂದು ರಾತ್ರಿ 8.30 ಕ್ಕೆ ಚನ್ನರಾಯಪಟ್ಟಣ ತಾಲ್ಲೂಕಿನ ದಿಡಗ ಗ್ರಾಮಕ್ಕೆ ಆಗಮಿಸಿ ವಾಸ್ತವ್ಯ ಮಾಡಲಿದ್ದಾರೆ.

ಸೆ.12 ರಂದು ಬೆಳಿಗ್ಗೆ 11.30 ಕ್ಕೆ ದಿಡಗ ಗ್ರಾಮದಲ್ಲಿ ಜನರ ಯೋಜನೆ ಕುರಿತು ಗ್ರಾಮಸ್ಥರೊಂದಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಧ್ಯಾಹ್ನ 1.30 ಕ್ಕೆ ಮೈಸೂರು ತಾಲ್ಲೂಕಿನ ಸಿದ್ದಲಿಂಗ ಪುರಕ್ಕೆ ಪ್ರಯಾಣ ಮಾಡಲಿದ್ದಾರೆ.

## ದಕ್ಷಿಣ ಭಾರತದಲ್ಲೂ ಪ್ರಕೃತಿ ವಿಕೋಪದ ಲಕ್ಷಣ: ಕೋಡಿಶ್ರೀ

### ಸಾವು-ನೋವು, ಊರುಗಳು ಕೊಚ್ಚಿ ಹೋಗುವ ಘಟನೆಗಳು ನಡೆಯಲಿವೆ

• ಪ್ರಜೋದಯ ವರದಿ

**ಹಾಸನ:** ಉತ್ತರ ಭಾರತದ ನೇಪಾಳದಲ್ಲಿ ನಡೆದಂತೆ ದಕ್ಷಿಣ ಭಾರತದಲ್ಲೂ ಪ್ರವಾಹ ದಂತಹ ಭೀಕರ ಘಟನೆಗಳು ನಡೆಯುವ ಲಕ್ಷಣ ಇದೆ. ಸಾವು-ನೋವು, ದುಃಖ, ಊರುಗಳು ಕೊಚ್ಚಿ ಹೋಗುವ ಘಟನೆಗಳು ನಡೆಯಲಿವೆ. ಈ ಬಗ್ಗೆ ಎಚ್ಚರಿಕೆ ವಹಿಸ ಬೇಕಾಗಿದೆ ಎಂದು ಕೋಡಿ ಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಅವರು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಮುಂಗಾರು ಮಳೆ ವಿರಳ, ಹಿಂಗಾರು ಮಳೆ ಆಗುತ್ತದೆ. ಜನ ಜಂಗುಳಿ ಯಾಗುತ್ತದೆ, ಅನ್ನ, ಆಹಾರ, ನೀರಿಗೆ ಕೊರತೆ ಯಾಗುತ್ತದೆ. ಸಾವು-ನೋವುಗಳು ಹೆಚ್ಚಾಗು ತ್ತದೆ. ವಿಪರೀತವಾದ ಪ್ರವಾಹ ಆಗುತ್ತೆ ಎಂದು ಹಿಂದೆಯೇ ಹೇಳಿದ್ದೆ, ಈಗ ಅದು ನಡೆಯುತ್ತಿದೆ. ಈಗ ಇಲ್ಲಿಂದ ಕಷ್ಟ ಮುಂದು ವರೆಯುತ್ತೆ ಎಂದು ತಿಳಿಸಿದರು.

ಈಗಾಗಲೇ ಮುಂಗಾರು ಮಳೆ ಕೈ ಕೊಟ್ಟಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದರ ಮಧ್ಯೆ ಇದೀಗ ಹಿಂಗಾರು ಸಮೃದ್ಧಿ ಯಾಗುತ್ತದೆ. ಹಿಂಗಾರು ಮಳೆ ಶುಭವಾ ಗುವ ಲಕ್ಷಣ ಇದೆ. ಕೆರೆ, ಕಟ್ಟೆಗಳು ತುಂಬು ತ್ತವೆ, ಅದರ ಬಗ್ಗೆ ತೊಂದರೆಯಿಲ್ಲ. ಹಿಂಗಾರು ಮಳೆ ಸಮೃದ್ಧಿಯಾಗಿ ಶೇ. 90



ಜನರಿಗೆ ಪರಿಹಾರ ಸಿಗುತ್ತದೆಂದು ಹೇಳಿದರು.

ಯಾವುದೇ ವಿಚಾರ ಮಾಡಬೇಕಾದರೂ ನೈಜ ಕಾರಣ ಬೇಕು. ಯಾವುದೇ ಮನೆ ಕಟ್ಟು ವಾಗ ಭೂಮಿ ನಿಲ್ಲಬೇಕಾದರೆ ತಳಪಾಯ ಮುಖ್ಯ. ಕಾಲಜ್ಞಾನದಲ್ಲಿ ಒಂದು ಮಾತಿದೆ, ಕಟ್ಟೆ ಇಲ್ಲದ ಬಾವಿ ಹುಟ್ಟಿ, ನೆಟ್ಟ ನೀ ಸುರಂ ಗವ ಕೊರೆದು, ಗಟ್ಟಿ ಭೂಮಿ ಬಟ್ಟ ಬಯಲಾ ಯಿತು.ಹಿಂದಿನಕಾಲದಲ್ಲಿ ನಲವತ್ತು, ಐವತ್ತು ಅಡಿ ಬಾವಿ ತೆಗೆಯುತ್ತಿದ್ದರು. ಆ ನೀರು ತಂದು ಕುಡಿದರೆ ಮನುಷ್ಯನಿಗೆ ಆರೋಗ್ಯ ವಿತ್ತು. ಈಗ ಸಾವಿರಾರು ಅಡಿ ಕೊರೆದು ಗಡಸು ನೀರು. ಮನುಷ್ಯನಿಗೆ ಆರೋಗ್ಯ ಇಲ್ಲ, ನರಗಳ ಕೊರತೆ, ಹಲ್ಲುಗಳು ಬಿದ್ದು ಹೋದವು, ಜ್ಞಾನ ಇಲ್ಲ, ಊಟ ಮಾಡಲು ಆಗಲ್ಲ, ಭೂಮಿ ಕೊರೆದಿದ್ದರಿಂದ ಗಟ್ಟಿ ಭೂಮಿ ಬಟಾಬಯಲಾಯಿತು ಎಂದರು.

ಭೂಮಿ ಕೊರೆದಿದ್ದರಿಂದ ಗಟ್ಟಿ ಭೂಮಿ ಬಯಲಾಯಿತು. ನೀರು ಸ್ಥಿರವಾಗಲಿಲ್ಲ. ಅದು ಎಲ್ಲಿ ಬೇಕು ಹರಿದುಬಂತು. ಹಾಗಾಗಿ ಸಾವು-ನೋವುಗಳಾದವು. ಇದಕ್ಕೆ ಪರಿಹಾರ ಎಂದರೆ ನಾವು ನಂಬಿರುವ ಭಗವಂತನನ್ನು ಪ್ರಾರ್ಥನೆ ಮಾಡುವುದು. ಆ ಭಗವಂತನ ಪ್ರಾರ್ಥನೆಯಿಂದ ಮುಂದೆ ಆಗುವುದು ತಪ್ಪಲಿ. ದಕ್ಷಿಣಭಾರತ, ಇಲ್ಲಿಯೂ ಅಪಾಯ ಆಗುವ ಲಕ್ಷಣ ಇದೆ ಎಂದು ತಿಳಿಸಿದರು.

### ಮುಖ್ಯಮಂತ್ರಿ ಆಗ್ತೀಯಾ ಎಂದು ಹೇಳಿದ್ದೆ

**ಡಿ.ಕೆ.ಶಿವಕುಮಾರ್, ನಮ್ಮ ಬಳಿ ಬಂದಾಗ ಮುಖ್ಯಮಂತ್ರಿ ಆಗ್ತೀಯಾ ಎಂದು ಹೇಳಿದ್ದೆ. ಹಾಗಾಗಿ ಅವರಿಗೆ ಆಶೀರ್ವಾದ ಕೊಡೋಣ, ಅಶುಭ ಹೇಳುವುದು ಬೇಡ. ರಾಜ್ಯಕ್ಕೆ ಹೊಸ ಮುಖ್ಯಮಂತ್ರಿ ಆಗಿರುವುದು ಒಳ್ಳೆಯದು, ಪ್ರೋತ್ಸಾಹ ಕೊಡಬೇಕು. ಯುವಕರು, ಅನುಭವಿ ಗಳಿಗೆ ಅಧಿಕಾರ ಸಿಕ್ಕಿದೆ. ಅದು ಯಾವ ಜನ್ಮದ ಪುಣ್ಯ. ಅದಕ್ಕೆ ನಾವು ಹೆಚ್ಚು ಪ್ರೋತ್ಸಾಹ ಕೊಡಬೇಕು. ಆಶೀರ್ವಾದ ಮಾಡಬೇಕು. ಅವರು ಮುಖ್ಯಮಂತ್ರಿ ಆದಮೇಲೆ ಬದಲಾವಣೆ ಕಾಣುತ್ತಿದೆ. ಸರಳವಾಗಿದ್ದಾರೆ, ಸಜ್ಜನರಾಗಿದ್ದಾರೆ, ಬಡವರ ನೋಡುವ ಶಕ್ತಿ ಮೊದಲಿಗು ಇತ್ತು. ಮುಂದುವರೆಯಲಿ ಎಂದು ಹಾರೈಸುತ್ತೇವೆ ಎಂದರು.**

## ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಎಸ್.ರವಿ ಅವಿರೋಧ ಆಯ್ಕೆ

• ಪ್ರಜೋದಯ ವರದಿ



**ಬೆಂಗಳೂರು:** ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರಾಗಿ ವಿಧಾನ ಪರಿಷತ್ ಸದಸ್ಯ ಎಸ್.ರವಿ ಹಾಗು ಉಪಾಧ್ಯಕ್ಷರಾಗಿ ಶರಣಗೌಡ ಪಾಟೀಲ ಬಯ್ಯಾಪುರ ಅವರು ಅವಿರೋಧ ಆಯ್ಕೆಯಾಗಿದ್ದಾರೆ.

ರಾಜ್ಯ ಸಹಕಾರಿ ಬ್ಯಾಂಕ್‌ಗೆ ಜನವರಿಯಲ್ಲೇ ಚುನಾವಣೆ ನಡೆಯಬೇಕಿತ್ತು. ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಒಮ್ಮತ ಮೂಡದ ಕಾರಣ ಚುನಾವಣೆ ಸುಮಾರು ನಾಲ್ಕು ತಿಂಗಳು ತಡವಾಗಿ ನಡೆದಿದೆ. ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನಲೆ ಎಸ್.ರವಿ ಮತ್ತು ಶರಣಗೌಡ ಪಾಟೀಲ ಬಯ್ಯಾಪುರ ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳ ಪೈಕಿ ಸಿದ್ದರಾಮಯ್ಯ ಅವರ ಆಪ್ತ ಕೆ.ಎನ್.ರಾಜಣ್ಣ ಅವರ ಹೆಸರು ಪ್ರಮುಖವಾಗಿ ಕೇಳಿಬಂದಿತ್ತು. ಅದರ ಬಗ್ಗೆ ಡಿ.ಕೆ. ಶಿವಕುಮಾರ್ ಅವರು ಅಪಸ್ವರ ಎತ್ತಿದ್ದು, ಎಸ್.ರವಿ ಹೆಸರನ್ನು ಸೂಚಿಸಿದ್ದರು. ಈ ನಡುವೆ ಬುಧವಾರ ಅಪೆಕ್ಸ್ ಬ್ಯಾಂಕ್‌ನ 19 ನಿರ್ದೇಶಕರೊಂದಿಗೆ ಸಹಕಾರ ಸಚಿವ ಲಕ್ಷ್ಮಣ ಸವದಿ ಸಭೆ ನಡೆಸಿದ್ದರು. ಸಭೆಯಲ್ಲಿ ಬಹುತೇಕ ನಿರ್ದೇಶಕರು ಎಸ್.ರವಿ ಅವರಿಗೆ ಬೆಂಬಲ ವ್ಯಕ್ತಪಡಿಸಿದ್ದರು ಎನ್ನಲಾಗಿದೆ. ಬಳಿಕ ಸವದಿ ಮತ್ತು ರಾಜಣ್ಣ ನಡುವೆ ಪ್ರತ್ಯೇಕವಾಗಿ ಮಾತುಕತೆ ನಡೆದಿದ್ದು, ಅಂತಿಮವಾಗಿ ಎಸ್. ರವಿ ಅವರನ್ನು ಆಯ್ಕೆ ಮಾಡಲಾಗಿದೆ.

## ಸೆ.18 ರಂದು ಅಂಚೆ ಅದಾಲತ್

**ಹಾಸನ :** ಸಾರ್ವಜನಿಕರು ಅಂಚೆ ವ್ಯವಸ್ಥೆಯ ಕುಂದು ಕೊರತೆಗಳ ಬಗ್ಗೆ ತಮ್ಮ ಅಹವಾಲುಗಳನ್ನು ನೀಡಲು ಸೆ.18 ರಂದು ಮಧ್ಯಾಹ್ನ 3 ಗಂಟೆಗೆ ನಗರದ ಅಂಚೆ ಅಧೀಕ್ಷಕರ ಕಚೇರಿ ಯಲ್ಲಿ ಅಂಚೆ ಅದಾಲತ್‌ನ್ನು ಏರ್ಪಡಿ ಸಲಾಗಿದ್ದು, ಸಾರ್ವಜನಿಕರು ಅಂಚೆ ಸೇವೆಯ ಬಗ್ಗೆ ಕುಂದು ಕೊರತೆಗಳು ಇದ್ದಲ್ಲಿ ಅಂಚೆ ಅಧೀಕ್ಷಕರ ಕಚೇರಿಗೆ ಸೆ.18 ರಂದು ಮಧ್ಯಾಹ್ನ 3 ಗಂಟೆ ಯೊಳಗೆ ಸಲ್ಲಿಸುವಂತೆ ಹಾಸನ ವಿಭಾ ಗದ ಅಂಚೆ ಅಧೀಕ್ಷಕರು ಕೋರಿದ್ದಾರೆ.

**ಹಾಸನ: ಶಾಸಕ ಹೆಚ್.ಪಿ. ಸ್ವರೂಪ್ ಅವರು ಗುರುವಾರ ತಾಲ್ಲೂಕಿನ ಕುಪ್ಪಳ್ಳಿ ಗ್ರಾಮದಲ್ಲಿ 60 ಲ.ರೂ. ವೆಚ್ಚದ ಆಯುಷ್ಮಾನ್ ಆರೋಗ್ಯ ಕೇಂದ್ರ ಕಟ್ಟಡಕ್ಕೆ ಭೂಮಿಪೂಜೆ ನೆರವೇರಿಸಿದರು. ಗ್ರಾಮಸ್ಥರು, ಗುತ್ತಿಗೆದಾರರು ಹಾಗು ಪಕ್ಷದ ಮುಖಂಡರು ಹಾಜರಿದ್ದರು.**



## ತತ್ವಾದರ್ಶಗಳ ದಾರಿಯಲ್ಲಿ ಸಾಗಿದರೆ ಬದುಕಿಗೆ ಶ್ರೇಷ್ಟತೆ



• ಪ್ರಜೋದಯ ವರದಿ

**ಮಾಡಾಳು:** ಮಾನವನ ಬದುಕು ಎಷ್ಟು ಶ್ರೇಷ್ಟವಾಗಿ ರುತ್ತದೆಯೋ ಅಷ್ಟೇ ನಿಕೃಷ್ಟವೂ ಆಗಿರುತ್ತದೆ. ತತ್ವಾ ದರ್ಶಗಳ ದಾರಿಯಲ್ಲಿ ಸಾಗಿದಾಗ ಶ್ರೇಷ್ಟತೆಯ ಸ್ವರೂಪ ಪಡೆಯುತ್ತದೆಂದು ಸಾಣೇಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಅವರು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕಣಕಟ್ಟೆ ಹೋಬಳಿ ರಾಂಪುರ ಗ್ರಾಮದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಉಪಾಧ್ಯಕ್ಷ ಆರ್.ಎನ್.ಶೇಖರಪ್ಪ ಅವರ ತಾಯಿ ರಾಮಕ್ಕ ಅವರ ಪುಣ್ಯಸ್ಮರಣೆ ಹಾಗು ಶರಣ ಸಮ್ಮೇಳನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀ ರ್ವಚನ ನೀಡಿದ ಅವರು, ಪ್ರತಿಯೊಬ್ಬ ವ್ಯಕ್ತಿಯು ಕನಿಷ್ಟ ಬದುಕನ್ನು ತೊರೆದು ಶ್ರೇಷ್ಟ ಬದುಕು ರೂಪಿಸಿ ಕೊಳ್ಳಬೇಕು ಎನ್ನುವುದು ಬಸವಾದಿ ಶಿವಶರಣರ ಹಾಗು ಹಿರಿಯ ಗುರುಗಳ ಆಶಯವಾಗಿತ್ತು. ಹುಟ್ಟು ಮತ್ತು ಸಾವಿನ ಮಧ್ಯೆ ಈ ನಡುವಿನ ಅವಧಿ ಯಲ್ಲಿ ಲೋಕಕ್ಕೆ ಉತ್ತಮ ಕೊಡುಗೆಗಳನ್ನು ನೀಡು ವುದು ಮಾನವ ಧರ್ಮ. ಭಕ್ತರು ಶ್ರೀಮಂತರಾದಾಗ ಅಹಂಕಾರ ಬೆಳೆಸಿಕೊಳ್ಳದೆ ಸತ್ಕಾರ್ಯಗಳನ್ನು ಮಾಡುವುದರ ಮೂಲಕ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕೆಂದರು.

ಪಾಂಡುಮಟ್ಟಿ ವಿರಕ್ತ ಮಠದ ಶ್ರೀ ಗುರು ಬಸವಾನಂದ ಸ್ವಾಮೀಜಿ ಅವರು ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಯುವ ಜನತೆ ಆಧುನಿಕ ಜೀವನ ಶೈಲಿಗೆ ಮಾರು ಹೋಗಿ ಮೌಲ್ಯಗಳು ಮತ್ತು ಹಿರಿ ಯರ ಸಿದ್ಧಾಂತಗಳನ್ನು ಗಾಳಿಗೆ ತೂರಿ ನಡೆಯುತ್ತಿ ರುವುದರಿಂದ ಸಮಾಜ ದಿಕ್ಕು ತಪ್ಪುತ್ತಿದೆ ಎಂದರು.

ಮಾಡಾಳು ನಿರಂಜನ ಪೀಠದ ಶ್ರೀ ರುದ್ರಮುನಿ ಸ್ವಾಮೀಜಿ ಅವರು ಮಾತನಾಡಿ, ಮಕ್ಕಳಲ್ಲಿ ಮಾತ ನಾಡುವ ಕಲೆಗಿಂತ ಕೇಳಿಸಿಕೊಳ್ಳುವ ಗುಣ ಬೆಳೆಯ ಬೇಕು. ಅಂತರಂಗದ ಸತ್ಯ ಶುದ್ಧ ಪ್ರಾಮಾಣಿಕತೆ ಅಹಿಂಸೆ ಸಹಕಾರ ಮತ್ತು ಪರೋಪಕಾರದಂತಹ ಸದ್ಗುಣಗಳನ್ನು ಅಳವಡಿಸಿಕೊಂಡಾಗ ಮಾತ್ರ ಬದುಕು ಸಾರ್ಥಕತೆ ಹೊಂದುತ್ತದೆಂದು ಹೇಳಿದರು.

ಕೋಳಗುಂದ ಕೇದಿಗೆ ಮಠದ ಜಯಚಂದ್ರ ಶೇಖರ ಸ್ವಾಮೀಜಿ, ಡಿ.ಎಂ.ಕುರ್ಕೆ ಬೂದಿಹಾಳ್ ವಿರಕ್ತಮಠದ ಶಶಿಶೇಖರ ಸಿದ್ದಬಸವ ಸ್ವಾಮೀಜಿ, ಉಪನ್ಯಾಸಕ ದಿಬ್ಬದಹಳ್ಳಿ ಶ್ಯಾಮಸುಂದರ್ ಮಾತನಾಡಿದರು. ಸಾಧು ಲಿಂಗಾಯಿತ ಸಮಾಜದ ಮುಖಂಡ ಅಣ್ಣಾಯಕನಹಳ್ಳಿ ವಿಜಯಕುಮಾರ್, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕ ಹೊಸೂರ್ ಗಂಗಾಧರ್, ಎನ್.ಜಿ.ಮರಳುಸಿದ್ದ ಸ್ವಾಮಿ ಮತ್ತಿತರರಿದ್ದರು.

## ನಗರದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಸಾಧ್ಯತೆ

» ಮೊದಲನೇ ಪುಟದಿಂದ

ನಗರಕ್ಕೆ ಹೆಚ್ಚುವರಿ ಪೌರಕಾರ್ಮಿಕರ ಕೊರತೆಯ ಬಗ್ಗೆ ಪ್ರಸ್ತಾಪಿಸಲಾಗಿದೆ ಎಂದು ಹೇಳಿದರು.

ನಗರದಲ್ಲಿ ಕಾರ್ಯ ನಿರ್ವಹಿಸು ತ್ತಿರುವ ನೀರುಗಂಟಿ, ಯುಜಿಡಿ ಸಿಬ್ಬಂದಿ ತಮ್ಮ ಸೇವೆಯನ್ನು ಖಾಯಂ ಗೊಳಿಸಬೇಕೆಂಬ ಬೇಡಿಕೆ ಮುಂದಿಟ್ಟಿ ದ್ದಾರೆ. ಅವರ ಕುಂದು ಕೊರತೆಗಳನ್ನು ಆಲಿಸಲಾಗಿದ್ದು, ಈ ಬೇಡಿಕೆಯನ್ನು ಸರ್ಕಾರದ ಹಾಗೂ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರುವ ಕುರಿತು ಚರ್ಚಿಸಲಾಗಿದೆ ಎಂದು ತಿಳಿಸಿದರು.

**ಪರಿಸರ ಸ್ನೇಹಿ ಗಣೇಶೋತ್ಸವಕ್ಕೆ ಮನವಿ**

ಗಣೇಶೋತ್ಸವ ಅಂಗವಾಗಿ ನಗರ ದಲ್ಲಿ ಪ್ರತಿಷ್ಠಾಪಿಸುವ ಗಣೇಶ ಮೂರ್ತಿಗಳ ವಿಸರ್ಜನೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದ್ದು, ಸಾರ್ವಜನಿ ಕರು ಕೆರೆ-ಕಟ್ಟೆ ಹಾಗು ಇತರ ಜಲಮೂಲಗಳಲ್ಲಿ ಮೂರ್ತಿಗಳನ್ನು ವಿಸರ್ಜಿಸಬಾರದು. ನಗರದ ಎಲ್ಲಾ 35 ವಾರ್ಡ್‌ಗಳಲ್ಲೂ ಗಣೇಶ ಮೂರ್ತಿ ವಿಸರ್ಜನೆಗಾಗಿ ನೀರಿನ ಟ್ಯಾಂಕರ್‌ಗಳ ಮೂಲಕ ಪ್ರತ್ಯೇಕ ವ್ಯವಸ್ಥೆ ಕಲ್ಪಿಸುವಂತೆ ಆಯುಕ್ತರಿಗೆ ಸೂಚನೆ ನೀಡಲಾಗಿದೆ. ಸಾರ್ವಜನಿಕರು ನಗರಾಡಳಿತ ಗುರುತಿಸಿರುವ ಸ್ಥಳಗಳಲ್ಲಿಯೇ ಮೂರ್ತಿಗಳನ್ನು ವಿಸರ್ಜಿಸುವ ಮೂಲಕ ಪರಿಸರ ಹಾಗು ಜಲಮೂಲಗಳ ಸಂರಕ್ಷಣೆಗೆ ಸಹಕರಿಸಬೇಕೆಂದರು.

ಮನೆಗಳಲ್ಲಿ ಪ್ರತಿಷ್ಠಾಪಿಸುವ ಸಣ್ಣ ಗಣೇಶ ಮೂರ್ತಿಗಳ ಜೊತೆಗೆ ಸಾರ್ವಜನಿ ಕವಾಗಿ ಪ್ರತಿಷ್ಠಾಪಿಸುವ ದೊಡ್ಡ ಗಣೇಶ ಮೂರ್ತಿಗಳ ವಿಸರ್ಜನೆಗೂ ಕ್ರಮ ಕೈಗೊಳ್ಳಲಾಗುತ್ತಿದೆ. ವಿಶೇಷವಾಗಿ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಸೇರಿ ಪರಿಸರಕ್ಕೆ ಹಾನಿಕಾರಕ ವಸ್ತುಗಳಿಂದ ತಯಾರಿಸಲಾದ ಮೂರ್ತಿಗಳ ವಿಸರ್ಜ ನೆಯಿಂದ ಕೆರೆ-ಕಟ್ಟೆ ಮತ್ತು ಜಲಮೂಲಗಳು ಕಲುಷಿತಗೊಳ್ಳುವ ಸಾಧ್ಯತೆ ಇರುವುದರಿಂದ, ಈ ಕುರಿತು ನಗರಾಡಳಿತ ಈಗಾಗಲೇ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ ಎಂದು ತಿಳಿಸಿದರು.

ಮಣ್ಣಿನಿಂದ ತಯಾರಿಸಲಾದ ಪರಿಸರ ಸ್ನೇಹಿ ಗಣೇಶ ಮೂರ್ತಿಗಳ ಬಳಕೆಗೆ ಉತ್ತೇಜನ ನೀಡಲಾಗುತ್ತಿದ್ದು, ಹೊರ ರಾಜ್ಯಗಳಿಂದ ತರಲಾಗುತ್ತಿರುವ ಕೆಲವು ಮೂರ್ತಿಗಳ ಗುಣಮಟ್ಟ ಹಾಗೂ ಅವುಗಳ ತಯಾರಿಕೆಯಲ್ಲಿ ಬಳಸಿರುವ ವಸ್ತು ಗಳ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತಿದೆ. ಪಿಒಪಿ ಮೂರ್ತಿಗಳ ಬಳಕೆ ಮತ್ತು ಮಾರಾಟದ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಈಗಾಗಲೇ ನಿಗಾವ ಹಿಸಿದ್ದು, ನಿಯಮ ಉಲ್ಲಂಘನೆಯಾದಲ್ಲಿ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಲಾಗಿದೆ. ನಗರದಲ್ಲಿ ಗಣೇಶೋತ್ಸವದ ಹಿನ್ನಲೆಯಲ್ಲಿ ಸ್ವಚ್ಛತೆ, ಕುಡಿಯುವ ನೀರು ಹಾಗು ಗಣೇಶ ಮೂರ್ತಿ ವಿಸರ್ಜನೆಗೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದರು.

## ಬೇಲೂರು ತಾಲ್ಲೂಕು ಬರಪೀಡಿತ ಪಟ್ಟಿಗೆ ಸೇರಿಸಲು ಆಗ್ರಹಿಸಿ ಪ್ರತಿಭಟನೆ

» ಮೊದಲನೇ ಪುಟದಿಂದ

ದರೆ ರೈತ ಸಂಘ, ಕಾಫಿ ಬೆಳೆಗಾರರ ಸಂಘ ಹಾಗು ವಿವಿಧ ಕನ್ನಡಪರ ಸಂಘಟನೆಗಳ ನೇತೃತ್ವ ದಲ್ಲಿ ಬೇಲೂರು ಬಂದ್‌ಗೆ ಕರೆ ನೀಡಲಾಗು ವುದೆಂದು ಎಚ್ಚರಿಕೆ ನೀಡಿದರು.

ರಾಜ್ಯದ ಹಲವು ತಾಲ್ಲೂಕುಗಳನ್ನು ಬರ ಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದೆ. ಆದರೆ ಬೇಲೂರನ್ನು ಕಡೆಗಣಿಸಲಾಗಿದೆ. ಜೋಳ ಸೇರಿ ಹಲವು ಬೆಳೆಗಳು ಒಣಗಿ ನಾಶವಾಗಿದ್ದು, ಗದ್ದೆಗಳಲ್ಲಿ ಬೆಳೆ ಬೆಳೆಯಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಮಲೆನಾಡು ಭಾಗದಲ್ಲಿ ಕಾಫಿ ಉದುರುತ್ತಿದ್ದು, ಮೆಣಸು ಸೇರಿ ವಿವಿಧ ಬೆಳೆಗಳು ಒಣಗುತ್ತಿವೆ. ಇಂತಹ ಗಂಭೀರ ಪರಿಸ್ಥಿತಿಯಲ್ಲಿಯೂ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸಲು ಸರ್ಕಾರ ಹಿಂದೇಟು ಹಾಕುತ್ತಿರುವುದು ಏಕೆ ಎಂಬುದು ಅರ್ಥವಾ ಗುತ್ತಿಲ್ಲ. ರಾಜಕೀಯ ಬದಿಗಿಟ್ಟು ರೈತರ ಸಂಕಷ್ಟ ಕ್ಕೆ ಸ್ಪಂದಿಸಬೇಕು. ಕೂಡಲೇ ಬರಪೀಡಿತ ತಾಲ್ಲೂಕು ಎಂದು ಘೋಷಿಸುವುದರ ಜೊತೆಗೆ ಆನೆ-ಮಾನವ ಸಂಘರ್ಷ ನಿಯಂತ್ರಣಕ್ಕೂ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಳ್ಳೂರು ಸ್ವಾಮಿಗೌಡ ಅವರು ಮಾತನಾಡಿ, ಮಲೆನಾಡು ಪ್ರದೇಶದಲ್ಲಿ ಸಾಮಾನ್ಯವಾಗಿ 60 ರಿಂದ 70 ಇಂಚು ಮಳೆಯಾಗುತ್ತಿತ್ತು. ಆದರೆ ಈ ಬಾರಿ ತೀವ್ರ ಬರ ಪರಿಸ್ಥಿತಿ ನಿರ್ಮಾಣ ವಾಗಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇ ಗೌಡ ಅವರು ತಾಲ್ಲೂಕಿಗೆ ಭೇಟಿ ನೀಡಿ ಬೆಳೆ ನಷ್ಟವನ್ನು ಪರಿಶೀಲಿಸಿ ಬರಪಟ್ಟಿಗೆ ಸೇರಿಸುವು ದಾಗಿ ಭರವಸೆ ನೀಡಿದ್ದರೂ ಈ ವರೆಗೆ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ವೈ.ಎಸ್. ಸಿದ್ದೇಗೌಡ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಬಯಲು ನಾಡು ಹಾಗು ಮಲೆನಾಡು ಎರಡೂ ಪ್ರದೇಶಗಳಿದ್ದು, ಮಲೆನಾಡಿನಲ್ಲಿ ಸಾಮಾನ್ಯ ವಾಗಿ 60 ರಿಂದ 70 ಇಂಚು ಮಳೆಯಾಗಬೇಕಾದ ಸಂದರ್ಭದಲ್ಲಿ ಈ ಬಾರಿ ಕೇವಲ 15 ರಿಂದ 18 ಇಂಚಿನಷ್ಟು ಮಳೆಯಾಗಿದೆ. ಬಹುವಾರ್ಷಿಕ ಬೆಳೆಯಾದ ಕಾಫಿ, ಮೆಣಸು ಸೇರಿ ವಿವಿಧ ಬೆಳೆಗಳು ಹಾನಿಗೊಳಗಾಗಿವೆ. ಕಾಫಿ ಉದುರು ತ್ತಿದ್ದು, ಮೆಣಸು ಬಳ್ಳಿಗಳು ಒಣಗುತ್ತಿವೆ. ಒಂದು ಬೆಳೆಯನ್ನು ಬೆಳೆಸಿ ಫಲ ಪಡೆಯಲು ರೈತರು ಹಲವು ವರ್ಷಗಳ ಕಾಲ ಶ್ರಮಿಸ ಬೇಕಾಗುತ್ತದೆ. ಹೀಗಾಗಿ ರೈತರ ನಷ್ಟವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಕೂಡಲೇ ಬರಪೀಡಿತ ತಾಲ್ಲೂಕು ಎಂದು ಘೋಷಿಸಿ ಪರಿಹಾರ ನೀಡಬೇಕೆಂದು ಆಗ್ರಹಿಸಿದರು.

ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಸಮಸ್ಯೆ ಎದುರಾಗುವ ಸಾಧ್ಯತೆಯಿದ್ದು, ಈಗಾಗಲೇ ಹಲವು ಹೊಳೆಗಳಲ್ಲಿ ನೀರಿನ ಹರಿವು ಕ್ಷೀಣಿಸಿದೆ. ಸರ್ಕಾರ ಪರಿಸ್ಥಿತಿಯನ್ನು ಅರಿತು ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರ ಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಕಾಫಿ ಬೆಳೆಗಾರರ ಸಂಘದ ಕಾರ್ಯದರ್ಶಿ ವೈ.ಡಿ.ಲೋಕೇಶ್, ರೈತ ಸಂಘದ ಕಾರ್ಯ ದರ್ಶಿ ಮನು, ಬಸವರಾಜು, ಭೂಮೇಶ್, ಶಿವೇಗೌಡ, ಶಿವಶಂಕರ್, ಪುಟ್ಟಸ್ವಾಮಿ, ಮೋಹನ್, ಕೆಆರ್‌ಎಸ್ ಪಕ್ಷದ ಅಧ್ಯಕ್ಷ ಆದೇಶ್ ಇತರರಿದ್ದರು.

## ಸಾಲಬಾಧೆ: ರೈತ ಆತ್ಮಹತ್ಯೆ

• ಪ್ರಜೋದಯ ವರದಿ



**ಹಾಸನ:** ಬೆಳೆ ಕೈಕೊಟ್ಟ ಹಿನ್ನಲೆ ಯಿಂದ ಜಿಗುಪ್ಸೆ ಗೊಂಡಿದ್ದ ರೈತ ಕಳೆನಾಶಕ ಔಷಧ ಸೇವಿಸಿ ಆತ್ಮ ಹತ್ಯೆಗೆ ಶರಣಾಗಿ ರುವ ಘಟನೆ ತಾಲ್ಲೂಕಿನ ದೋರನ ಹಳ್ಳಿಯಲ್ಲಿ ನಡೆದಿದೆ. ಗ್ರಾಮದ ಜಗದೀಶ್(45) ಮೃತರು.

ಶುಂಠಿ, ಆಲೂಗಡ್ಡೆ, ಮೆಕ್ಕೆಜೋಳ ಬೆಳೆ ಕೈಗೊಂಡಿದ್ದರು. ಕೃಷಿ ಚಟುವಟಿಕೆ ಗಾಗಿ ಕಾವೇರಿ ಗ್ರಾಮೀಣ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ವಿವಿಧ ಸಂಘ-ಸಂಸ್ಥೆಗಳು ಹಾಗು ಕೈ ಸಾಲದ ಮೂಲಕ 10 ಲ. ರೂ. ಸಾಲ ಮಾಡಿ ಕೊಂಡಿದ್ದರು ಎನ್ನಲಾಗಿದೆ. ಸಾಲ ಮರುಪಾವತಿಸುವಂತೆ ಕಾವೇರಿ ಗ್ರಾಮೀಣ ಬ್ಯಾಂಕ್‌ನಿಂದ ನೋಟೀಸ್ ಜಾರಿಯಾದ್ದರಿಂದ ಪತ್ನಿಯ ಕೆಲ ಚಿನ್ನಾ ಭರಣಗಳನ್ನು ಅಡವಿಟ್ಟು ಸಾಲದ ಒಂದು ಕಂತು ಕಟ್ಟಿದ್ದರು. ಆದರೆ ಮಳೆ ಕೊರತೆಯಿಂದ ಬೆಳೆ ಗಳು ಒಣಗಲಾ ರಂಭಿಸಿದ್ದರಿಂದ ಕೃಷಿ ವೆಚ್ಚ ಮತ್ತು ಸಾಲದ ಹೊರೆ ಮತ್ತಷ್ಟು ಹೆಚ್ಚಾಯಿತು. ಅದರಿಂದ ಮನ ನೊಂದ ಅವರು ಬುಧವಾರ ಜಮೀನಿ ನಲ್ಲೇ ಕಳೆನಾಶಕ ಸೇವಿಸಿ ಮೃತಪಟ್ಟಿ ದ್ದಾರೆ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಎಣ್ಣೆ ಕೊಡಿಸದಿದ್ದಕ್ಕೆ ಮಾರಣಾಂತಿಕ ಹಲ್ಲೆ

**ಹಾಸನ:** ಮದ್ಯ ಕೊಡಿಸಲಿಲ್ಲವೆಂಬ ಕಾರಣಕ್ಕೆ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಸುಳ್ಳು ಹೇಳಿಕೆ ದಾಖಲಿಸಿರುವ ಘಟನೆ ನಡೆದಿದೆ.

ನಗರದ ಗದ್ದೆಹಳ್ಳ (80 ಅಡಿ ರಸ್ತೆ)ದ ನಿವಾಸಿ ಫೈರೋಜ್ ಖಾನ್ ಎಂಬುವ ವರ ಮೇಲೆ ಅಂಬೇಡ್ಕರ್ ನಗರದ ಶೀರು ಎಂಬಾತ ಹಲ್ಲೆ ಮಾಡಿದ್ದಾನೆ. ಹಮಾಲಿ ಕೆಲಸ ಮಾಡಿಕೊಂಡಿರುವ ಫೈರೋಜ್ ಖಾನ್ ಸೆ. 2ರ ರಾತ್ರಿ 9 ಗಂಟೆಗೆ ಕೆಲಸ ಮುಗಿಸಿ ಮನೆಗೆ ವಾಪಾ ಸ್ಸಾಗುತ್ತಿದ್ದಾಗ ಉಷಾ ಬಾರ್ ಸಮೀಪ ಎದುರಾದ ಶೀರು ಎಣ್ಣೆ ಕೊಡಿಸು ಅಥವಾ ಹಣ ಕೊಡು ಎಂದು ಒತ್ತಾಯಿ ಸಿದ್ದಾನೆ. ಫೈರೋಜ್ ಖಾನ್ ಅದಕ್ಕೆ ಒಪ್ಪದ ಹಿನ್ನಲೆಯಲ್ಲಿ ಕೈಗಳಿಂದ ಬಲ ವಾಗಿ ಮುಷ್ಟಿ ಕಟ್ಟಿ ಬಲವಾಗಿ ಹೊಡೆದ ಪರಿಣಾಮ ಕಿವಿ ಮತ್ತು ಮೂಗಿನಲ್ಲಿ ರಕ್ತ ಸೋರಿ ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ. ಪರಿಸ್ಥಿತಿ ಗಂಭೀರವಾಗುತ್ತಿದ್ದಂತೆ ಫೈರೋಜ್ ಅವರ ಮಗಳು ರುಕ್ಸಾನಳಿಗೆ ಕರೆ ಮಾಡಿ ಸ್ಥಳಕ್ಕೆ ಬರುವಂತೆ ತಿಳಿಸಿದ್ದಾನೆ.

ಯಾವುದೋ ವಾಹನದಲ್ಲಿ ರುಕ್ಸಾನ ತಮ್ಮ ತಂದೆಯನ್ನು ಮನೆಗೆ ಕರೆದು ಕೊಂಡು ಬಂದರಾದರೂ ತೀವ್ರ ರಕ್ತ ಸೋರುತ್ತಿದ್ದ ಹಿನ್ನಲೆಯಲ್ಲಿ ಹಿಮ್ಸ್‌ಗೆ ದಾಖಲಿಸಿದ್ದಾರೆ. ಆಸ್ಪತ್ರೆಗೆ ಜೊತೆಗೆ ಬಂದಿದ್ದ ಶೀರು ದಾಖ ಲಾತಿಯಲ್ಲಿ ಬರೆಸುವಾಗ ಸೆಲ್ಫ್ ಫಾಲ್ ಎಂಬುದಾಗಿ ಸುಳ್ಳು ಹೇಳಿ ರುಕ್ಸಾನಾಳಿಂದ ಸಹಿ ಹಾಕಿಸಿದ್ದಾನೆ ಎನ್ನಲಾಗಿದೆ.

ಫೈರೋಜ್ ಖಾನ್‌ನನ್ನು ಹೆಚ್ಚಿನ ಚಿಕಿತ್ಸೆ ಗಾಗಿ ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾ ಗಿದೆ. ಈಗ ಚೇತರಿಸಿಕೊಂಡಿರುವ ಅವರು ಗಂಭೀರ ಗಾಯಕ್ಕೆ ಶೀರು ಹೊಡೆದಿರುವುದು ಕಾರಣವೆಂದು ಹೇಳಿದ್ದಾರೆ. ನಗರ ಠಾಣೆ ಯಲ್ಲಿ ಪ್ರಕರಣ ದಾಖಲಾಗಿದೆ.

## ಬೈಕ್‌ಗಳ ಮುಖಾಮುಖಿ: ವ್ಯಕ್ತಿ ಸಾವು

**ಅರಕಲಗೂಡು:** ಬೈಕ್‌ಗಳ ಮುಖಾಮುಖಿ ಡಿಕ್ಕಿಯಲ್ಲಿ ವ್ಯಕ್ತಿ ಮೃತಪಟ್ಟು ಮತ್ತೊಬ್ಬರು ಗಾಯಗೊಂಡಿರುವ ಘಟನೆ ರಾಮನಾಥ ಪುರ-ಬೆಟ್ಟದಪುರ ಮುಖ್ಯರಸ್ತೆಯ ಚಿರಂಜೀವಿ ಇಟ್ಟಿಗೆ ಫ್ಯಾಕ್ಟರಿ ಮುಂಭಾಗ ನಡೆದಿದೆ.

ಕೊಡಗು ಜಿಲ್ಲೆ ಕುಡಮಗಳೂರು ಗ್ರಾಮದ ಗಣೇಶ್ ಮೃತರು. ಗ್ರಾಮದ ನಾರಾಯಣಗೌಡ ಅವರೊಂದಿಗೆ ರಾಮ ನಾಥಪುರದಿಂದ ಊರಿಗೆ ಹೋಗುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಬೈಕ್ ಡಿಕ್ಕಿಯಾಗಿದೆ. ಗಂಭೀರ ಗಾಯಗೊಂ ಡಿದ್ದ ಇಬ್ಬರನ್ನೂ ಆಸ್ಪತ್ರೆಗೆ ದಾಖಲಿಸಲಾ ಗಿತ್ತು. ತೀವ್ರ ರಕ್ತಸ್ರಾವವಾದ ಹಿನ್ನಲೆ ಯಲ್ಲಿ ಗಣೇಶ್ ಚಿಕಿತ್ಸೆ ಫಲಿಸದೆ ಮೃತ ಪಟ್ಟಿದ್ದಾರೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪರಿಷತ್ ಅಧಿಕಾರ ಸಾಹಿತಿಗಳು, ಚಿಂತಕರೇ ಹಿಡಿಯಬೇಕು

### ಕಸಾಪ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಜಾಣಗೆರೆ ವೆಂಕಟರಾಮಯ್ಯ

• ಪ್ರಜೋದಯ ವರದಿ




**ಹಾಸನ:** ಕನ್ನಡ ಸಾಹಿತ್ಯ ಪರಿಷತ್ ಅಧಿಕಾರವನ್ನು ರಾಜಕೀಯೇತರವಾಗಿ ಸಾಹಿತಿಗಳು, ಚಿಂತಕರೇ ಹಿಡಿ ಯಬೇಕೆಂಬ ಸದುದ್ದೇಶದಿಂದ ಚಿಂತನ- ಮಂಥನ ನಡೆಸಿ ನನ್ನನ್ನು ಅಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾರೆ. ಈ ನಿಟ್ಟಿನಲ್ಲಿ ತಮಗೆ ಬೆಂಬಲ ನೀಡುವಂತೆ ಸಾಹಿತಿ, ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ ಅವರು ಮನವಿ ಮಾಡಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಹುತೇಕ ಸಾಹಿತಿಗಳು ತಮಗೆ ಬೆಂಬಲ ನೀಡಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ರಾಜ ಕೀಯ ಪಕ್ಷಗಳು, ಜಾತಿ ಪ್ರಬಲ ಪಾತ್ರ ವಹಿಸುವು ದಿಲ್ಲವೆಂಬ ವಿಶ್ವಾಸವಿದೆ. ಈಗಾಗಲೇ ರಾಜ್ಯದ ದಕ್ಷಿಣ ಕರ್ನಾಟಕದ ಜಿಲ್ಲೆಗಳ ಪ್ರವಾಸ ಮಾಡಿದ್ದು, ಉತ್ತಮ ಬೆಂಬಲ ವ್ಯಕ್ತವಾಗುತ್ತಿದೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತನ್ನು ನಾಡಪರ ವಾದ ಬೃಹತ್ ಶಕ್ತಿ ಸಂಘಟನೆಯಾಗಿ ರೂಪಿಸುವ ಸಂಕಲ್ಪ ಹೊಂದಿದ್ದೇವೆ. ಹಿಂದೆ ಅಧಿಕಾರ ನಡೆಸಿದವರು ಕನ್ನಡ ಸಾಹಿತ್ಯ ಪರಿಷತ್ತನ್ನು ಸರ್ವಾಧಿ ಕಾರ, ಭ್ರಷ್ಟಾಚಾರದಿಂದ ಹಾಳು ಮಾಡಿದ್ದಾರೆ. ಯಾವುದೇ ಪ್ರಶಸ್ತಿ ನೀಡಲಿಲ್ಲ, ಸಾಹಿತಿಗಳಿಗೆ ಗೌರವ ಕೊಡಲಿಲ್ಲ, ಈ ವಾತಾವರಣವನ್ನು ಹೋಗಲಾಡಿಸಬೇಕು. ಸಾಮಾನ್ಯ ಕನ್ನಡಿಗರ ಹೆಮ್ಮೆ ಪರಿಷತ್ ಆಗಬೇಕೆಂಬ ಉದ್ದೇಶದಿಂದ ನಮ್ಮ ಹೋರಾಟವನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದರು.

ನಿರಂತರವಾಗಿ ಸಾಹಿತ್ಯ ಚಟುವಟಿಕೆ ಮುಂದು ವರಿಯಬೇಕು. ಕನ್ನಡ ನಿಘಂಟು ಕಾರ್ಯ ಮುಂದು ವರಿಯಬೇಕು. ಪ್ರಶಸ್ತಿ ನೀಡುವುದು ಮತ್ತೆ ಆರಂಭ ಆಗಬೇಕು. ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಜೊತೆಗೆ ಜಿಲ್ಲಾ ಪರಿಷತ್ ಅಂಗಳದಲ್ಲೂ ಪುಸ್ತಕ ಸಂತೆ ನಡೆಯಬೇಕು ಎಂಬುದು ನಮ್ಮ ಬಯಕೆ. ಈ ಮೂಲಕ ಓದುವ ಸಂಸ್ಕೃತಿ ಮುಂದುವರಿಯಬೇಕು, ಯುವ ಲೇಖಕರಿಗೆ ಉತ್ತೇಜನ ಸಿಗಬೇಕು ಎಂದರು.

ಸಾಹಿತಿ ಆರ್.ಜಿ.ನಾಗರಾಜ್ ಅವರು ಮಾತ ನಾಡಿ, 112 ವರ್ಷಗಳ ಇತಿಹಾಸ ಹೊಂದಿರುವ ಪರಿಷತ್ ಪ್ರಸ್ತುತ ಸರ್ವಾಧಿಕಾರಿಗಳ ಕಪಿಮುಷ್ಟಿಗೆ ಸಿಲುಕಿ ಸಾಹಿತ್ಯಿಕ ಚಟುವಟಿಕೆ ನಿಷ್ಕ್ರಿಯ ವಾಗಿವೆ. ಪರಿಷತ್‌ಗೆ ಘನತೆಯನ್ನು ಮತ್ತೆ ಹೆಚ್ಚಿಸಲು ಪ್ರಾಮಾ ಣಿಕ, ಸಾಹಿತ್ಯ, ಪತ್ರಿಕೋದ್ಯಮ, ಹೋರಾಟ ಸೇರಿ ಹಲವು ಕ್ಷೇತ್ರಗಳಲ್ಲಿ ದುಡಿದಿರುವ ವೆಂಕಟರಾಮಯ್ಯ ಅವರನ್ನು ಸಮಾನ ಮನಸ್ಕರು ಸೇರಿ ಚುನಾವಣೆಗೆ ನಿಲ್ಲಿಸುತ್ತಿದ್ದು, ಎಲ್ಲರೂ ಬೆಂಬಲ ನೀಡಬೇಕೆಂದು ಮನವಿ ಮಾಡಿದರು.

ಕನ್ನಡಪರ ಹೋರಾಟಗಾರ ಸಿ.ಟಿ.ರಾಮೇಗೌಡ ಅವರು ಮಾತನಾಡಿ, ಜಾಣಗೆರೆ ವೆಂಕಟ ರಾಮಯ್ಯ ಅವರು ಸಜ್ಜನ, ಪ್ರಾಮಾಣಿಕರಾಗಿದ್ದು, ಈ ಬಾರಿ ಜಾತಿ, ರಾಜಕೀಯ ಮುಕ್ತ ಚುನಾವಣೆ ನಡೆಯ ಬೇಕು. ಎಲ್ಲರೂ ಜಾಣಗೆರೆ ಅವರಿಗೆ ಬೆಂಬಲ ನೀಡಬೇಕೆಂದು ವಿನಂತಿಸಿದರು.

ಸಾಹಿತಿ ಜಯಪ್ರಕಾಶ್‌ಗೌಡ ಅವರು ಮಾತನಾಡಿ, ಪರಿಷತ್ ನೋಡಿದರೆ ನನ್ನಂಥ ಸಾಹಿತ್ಯ ಪರಿಚಾರಕ ರಿಗೆ ಸಂಕಟ ಆಗುತ್ತಿದೆ. ಜಾತಿ, ವರ್ಗ, ರಾಜಕೀಯ ಸೇರಿ ಪರಿಷತ್ ಕಲುಷಿತವಾಗಿದೆ. ವ್ಯಕ್ತಿಕೇಂದ್ರಿತ ಆಡ ಳಿತದಿಂದ ಅನಾಹುತ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಜಾಣಗೆರೆ ಅವರು ವ್ಯವಸ್ಥೆ ಬದಲಾಯಿಸುವ ವ್ಯಕ್ತಿಯಾಗಿ ನಮ್ಮ ಮುಂದೆ ಇದ್ದಾರೆ. ಅವರಿಗೂ ಎಲ್ಲಾ ಕಡೆಯಿಂದ ವ್ಯಾಪಕ ಬೆಂಬಲ ಸಿಗುತ್ತಿದೆ ಎಂದರು. ಚಲನಚಿತ್ರ ನಿರ್ದೇಶಕ ನಂಜುಂಡೇಗೌಡ, ಕನ್ನಡಪರ ಹೋರಾಟಗಾರ ಬಾಳ್ಳುಗೋಪಾಲ್, ಧರ್ಮರಾಜ್ ಕಡಗ ಇದ್ದರು.

## ಬೆಲೆ ಕುಸಿತ: ರೈತನಿಂದ ಕೊತ್ತಂಬರಿ ಸೊಪ್ಪು ನಾಶ

• ಪ್ರಜೋದಯ ವರದಿ



**ಹಾಸನ:** ಮಾರುಕಟ್ಟೆಯಲ್ಲಿ ಕೊತ್ತಂಬರಿ ಸೊಪ್ಪಿಗೆ ಸೂಕ್ತ ಬೆಲೆ ದೊರೆಯದ ಹಿನ್ನಲೆ ರೈತನೊಬ್ಬ ಬೆಳೆದ ಬೆಳೆಯನ್ನು ಟ್ರ್ಯಾಕ್ಟರ್ ಮೂಲಕ ನಾಶಪಡಿಸಿರುವ ಘಟನೆ ತಾಲ್ಲೂಕಿನ ದುದ್ದ ಹೋಬಳಿ ಹರಿಹರಪುರದಲ್ಲಿ ನಡೆದಿದೆ.

ಗ್ರಾಮದ ರೈತ ಸತೀಶ್ ಅವರು ಸಾಲ ಮಾಡಿ ಒಂದು ಎಕರೆ ಜಮೀನಿ ನಲ್ಲಿ ಕೊತ್ತಂಬರಿ ಸೊಪ್ಪು ಬೆಳೆದಿದ್ದರು. ಉತ್ತಮ ಇಳುವರಿ ಬಂದಿದ್ದರೂ ಮಾರುಕಟ್ಟೆಯಲ್ಲಿ ಬೆಳೆಗೆ ನಿರೀಕ್ಷಿತ ಬೆಲೆ ದೊರೆಯದ ಕಾರಣ ಕೊಯ್ಲು, ಸಾಗಣೆ ಹಾಗು ಕೂಲಿ ವೆಚ್ಚವನ್ನೂ ಭರಿಸುವುದುಕಷ್ಟಕರವಾಗಿದೆ. ಹೀಗಾಗಿ ಬೆಳೆ ಮಾರಾಟದಿಂದ ಯಾವುದೇ ಪ್ರಯೋಜನವಿಲ್ಲ ಎಂಬ ಪರಿಸ್ಥಿತಿಗೆ ತಲುಪಿದ ಅವರು, ಅನಿವಾರ್ಯ ವಾಗಿ ಟ್ರ್ಯಾಕ್ಟರ್‌ನಿಂದ ಕೊತ್ತಂಬರಿ ಬೆಳೆಯನ್ನು ನಾಶಪಡಿಸಿದ್ದಾರೆ.

ಕೊತ್ತಂಬರಿ ಬೆಳೆಯಲು ಬೀಜ, ಗೊಬ್ಬರ, ಔಷಧ, ನೀರು, ಕೂಲಿ ಸೇರಿ ಸಾಕಷ್ಟು ಹಣ ಖರ್ಚು ಮಾಡಲಾ ಗಿತ್ತು. ಉತ್ತಮ ಬೆಳೆ ಬಂದಿದ್ದರೂ ಮಾರುಕಟ್ಟೆ ಬೆಲೆ ಕೈಹಿಡಿಯದ ಪರಿ ಣಾಮ ಮಾಡಿದ ಖರ್ಚು ಕೂಡ ವಾಪಾಸ್ ಪಡೆಯಲಾಗದ ಸ್ಥಿತಿ ನಿರ್ಮಾಣವಾಗಿದೆ. ಅದರಿಂದ ರೈತರು ತೀವ್ರ ಆರ್ಥಿಕ ನಷ್ಟ ಅನುಭವಿ ಸುವಂತಾಗಿದೆ.

ಕಷ್ಟಪಟ್ಟು ಬೆಳೆದ ಬೆಳೆ ಕೈಗೆ ಬಂದ ಸಂದರ್ಭದಲ್ಲಿ ಸೂಕ್ತ ಬೆಲೆ ದೊರೆ ಯದೆ ಜಮೀನಿನಲ್ಲೇ ನಾಶಪಡಿಸುವ ಪರಿಸ್ಥಿತಿ ಎದುರಾಗಿರುವುದು ಕೃಷಿ ಕ್ಷೇತ್ರದ ದುರಂತಕ್ಕೆ ಸಾಕ್ಷಿಯಾಗಿದೆ. ಒಂದೆಡೆ ಕೃಷಿ ಉತ್ಪಾದನಾ ವೆಚ್ಚ ನಿರಂತರವಾಗಿ ಹೆಚ್ಚುತ್ತಿದ್ದರೆ, ಮತ್ತೊಂ ದೆಡೆ ಮಾರುಕಟ್ಟೆಯಲ್ಲಿ ಬೆಲೆ ಕುಸಿತವಾ ಗುತ್ತಿರುವುದು ರೈತರ ಆತಂಕವನ್ನು ಹೆಚ್ಚಿಸಿದೆ. ರೈತರು ಬೆಳೆದ ಉತ್ಪನ್ನಗಳಿಗೆ ವೈಜ್ಞಾನಿಕ ಹಾಗು ನ್ಯಾಯಯುತ ಬೆಲೆ ದೊರೆಯುವಂತೆ ಪರಿಣಾಮಕಾರಿ ಮಾರುಕಟ್ಟೆ ವ್ಯವಸ್ಥೆ ರೂಪಿಸ ಬೇಕು. ಬೆಲೆ ಕುಸಿತದ ಸಂದರ್ಭದಲ್ಲಿ ಸರ್ಕಾರ ಮಧ್ಯಪ್ರವೇಶಿಸಿ ರೈತರ ಉತ್ಪನ್ನಗಳನ್ನು ಖರೀದಿಸುವ ವ್ಯವಸ್ಥೆ ಯಾಗಬೇಕೆಂದರು.

## ಡಿ.ಜೆ. ಬಳಸಲು ಅನುಮತಿಗೆ ಮನವಿ




• ಪ್ರಜೋದಯ ವರದಿ

**ಹಾಸನ:** ಗಣೇಶೋತ್ಸವ ಸಮಾರಂಭ ಮತ್ತು ಮೆರವಣಿಗೆ ವೇಳೆ ಡಿ.ಜೆ. ಸಂಗೀತ ಬಳಸಲು ಅವಕಾಶ ನೀಡಬೇಕೆಂದು ಜಿಲ್ಲಾ ಧ್ವನಿವರ್ಧಕ ಮತ್ತು ವಿದ್ಯುತ್ ದೀಪಾಲಂಕಾರ ಮಾಲೀಕರ ಸಂಘ ಅಧ್ಯಕ್ಷ ಟಿ.ಸಿ.ರವಿ ಅವರು ಮನವಿ ಮಾಡಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವೃತ್ತಿಯನ್ನೇ ನಂಬಿಕೊಂಡು 250-300 ಮಂದಿ ಇದ್ದು, ಕಷ್ಟದಲ್ಲಿರುವ ನಮ್ಮ ಮನವಿಗೆ ಜಿಲ್ಲಾಡಳಿತ ಮತ್ತು ಸರ್ಕಾರ ಸ್ಪಂದಿಸಬೇಕು. ಇಂಥಹ ಹಬ್ಬದ ಸಂದರ್ಭದಲ್ಲಿ ಮಾತ್ರ ಡಿ.ಜೆ. ಬಳಕೆ ಮಾಡುತ್ತಾರೆ. ಈ ಸಂದರ್ಭದಲ್ಲಿ ನಮಗೆ ಅಷ್ಟೋ ಇಷ್ಟೋ ಅನುಕೂಲವಾಗಲಿದೆ. ಹಾಗಾಗಿ ಡಿ.ಜೆ. ಬಳಸಲು ಅವಕಾಶ ನೀಡಬೇಕೆಂದು ಒತ್ತಾಯಿಸಿದರು.

ಪ್ರಧಾನ ಕಾರ್ಯದರ್ಶಿ ಕುಮಾರಸ್ವಾಮಿ ಅವರು ಮಾತನಾಡಿ, ಸರ್ಕಾರದ ಮಾರ್ಗಸೂಚಿ ಪ್ರಕಾರ 60 ಡೆಸಿಬಲ್, ಕಡಿಮೆ ಸ್ಪೀಕರ್ ಬಳಕೆ ಮಾಡುತ್ತೇವೆ. ಕಡಿಮೆ ಸೌಂಡ್ ನಿಯಮ ಪಾಲನೆ ಮಾಡುತ್ತೇವೆ. ದಯವಿಟ್ಟು ಡಿ.ಜೆ. ಬಳಕೆಗೆ ಅನುಮತಿ ಕೊಡಿ ಎಂದು ಸರ್ಕಾರ, ಜಿಲ್ಲಾ ಉಸ್ತುವಾರಿ ಸಚಿವರಲ್ಲಿ ಮನವಿ ಮಾಡಿದರು.

ಪದಾಧಿಕಾರಿಗಳಾದ ವಿಜಯಪ್ರಸಾದ್, ಶಿವಕುಮಾರ್, ಶೇಖರ್, ವೆಂಕಟೇಶ್, ಲೋಕೇಶ್ ಇದ್ದರು.

### ಚ.ರಾ.ಪಟ್ಟಣದಲ್ಲಿ ರಾಜ್ಯ ಮಟ್ಟದ ಗಾಂಧಿ ತತ್ವ ಪ್ರಣೀತ ಯುವಜನ ಶಿಬಿರ

## ಗಾಂಧೀಜಿಯವರ ವಿಚಾರಧಾರೆಗಳನ್ನು ಕೊಲ್ಲಲು ಸಾಧ್ಯವಿಲ್ಲ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಹಾತ್ಮ ಗಾಂಧೀಜಿಯವರ ಕನಸಿನ ರಾಮರಾಜ್ಯ ಹಾಗೂ ಉತ್ತಮ ಸಮಾಜ ಸೃಷ್ಟಿಯಾಗಬೇಕೆಂದು ಗದಗ್ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಡಿ.ಆರ್. ಪಾಟೀಲ್ ಅವರು ಹೇಳಿದರು.

ತಾಲ್ಲೂಕಿನ ದಿಡಗ ಗ್ರಾಮದ ಸುವರ್ಣ ಭವನದಲ್ಲಿ ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ಆಯೋಜಿಸಿರುವ ರಾಜ್ಯ ಮಟ್ಟದ ಗಾಂಧಿ ತತ್ವ ಪ್ರಣೀತ ಯುವಜನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಗಾಂಧೀಜಿ ಯವರ ವಿಚಾರಧಾರೆಗಳನ್ನು ಕೊಲ್ಲಲು ಸಾಧ್ಯ ವಿಲ್ಲ. ಸಮಾಜದಲ್ಲಿ ಪ್ರಜೆಗಳೇ ಪ್ರಭುಗಳು. ಸದ್ಯದ ಪರಿಸ್ಥಿತಿಯಲ್ಲಿ ಸಮಾಜವು ಮೊದಲಿ ನಂತಿಲ್ಲ. ಸ್ವಾಸ್ಥ್ಯ ಹದಗೆಟ್ಟಿದೆ. ಉತ್ತಮ ಸಂಸ್ಕೃತಿ ನಿರ್ಮಾಣ ವಾಗಬೇಕು. ಬದುಕು ಹಾಗೂ ನಮ್ಮ ನಡೆ ಪರಿಣಾಮಕಾರಿಯಾಗಬೇಕು. ಪ್ರತಿಭಾನ್ವಿ ತರಿಗೆ ಸಹಕಾರ ನೀಡುವುದರ ಜೊತೆಗೆ ಯಾರು ಸಹ ಶಿಕ್ಷಣದಿಂದ ವಂಚಿತರಾಗ ಬಾರದೆಂದು ತಿಳಿಸಿದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತ ನಾಡಿ, ಮಹಾತ್ಮ ಗಾಂಧೀಜಿಯವರು ದೈಹಿಕ ವಾಗಿ ನಮ್ಮೊಂದಿಗೆ ಇಲ್ಲವಾದರೂ ಅವರ ಆದರ್ಶ ಹಾಗೂ ತತ್ವ ಸಂದೇಶಗಳು ಇಂದಿಗೂ ಜೀವಂತ ವಾಗಿವೆ. ಅವರ ಹೋರಾಟದ ಫಲವಾಗಿ ಇಂದು ನಾವು ಸ್ವತಂತ್ರರಾಗಿ ಬದುಕು ಕಟ್ಟಿಕೊಂಡಿ ದ್ದೇನೆ. ಈ ಭೂಮಿ ಹಾಗೂ ಪ್ರಪಂಚ ಇರುವವರೆಗೂ ಅವರ ಹೆಸರು ಶಾಶ್ವತವಾಗಿ ಉಳಿದಿರು ತ್ತದೆ. ಮಹಾತ್ಮ ಗಾಂಧೀಜಿಯವರ ಚಿಂತನೆ ಹಾಗೂ ಸ್ವಾತಂತ್ರ ಹೋರಾಟ ಎಂದಿಗೂ ಮರೆಯುವಂತಿಲ್ಲ ಎಂದು ಬಣ್ಣಿಸಿದರು.



ಯಾವುದೇ ವ್ಯಕ್ತಿಯು ಯಶಸ್ಸಿನ ಮೆಟ್ಟಿಲು ಹತ್ತುವಾಗ ಹಿಂದಿರುಗಿ ನೋಡಬಾರದು. ಯಶಸ್ಸು ಕಂಡ ನಂತರ ತಾನು ನಡೆದು ಬಂದ ದಾರಿಯನ್ನು ಹಿಂದಿರುಗಿ ನೋಡುವುದನ್ನು ಮರೆ ಯಬಾರದು. ಒಳ್ಳೆಯ ಸ್ನೇಹಿತರು ಸಿಗಲಿಲ್ಲವಾ ದಲ್ಲಿ ಪುಸ್ತಕಗಳನ್ನೇ ಸ್ನೇಹಿತರನ್ನಾಗಿ ಮಾಡಿಕೊಳ್ಳಿ. ವಿಚಾರಧಾರೆಗಳಿಂದ ನೀವು ಸಮಾಜದಲ್ಲಿ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಕಾರಿಯಾ ಗಲಿದೆ ಎಂದು ಶಿಬಿರಾರ್ಥಿಗಳಿಗೆ ಸಲಹೆ ನೀಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ ಅವರು ಮಾತ ನಾಡಿ, ಮಹಾತ್ಮ ಗಾಂಧೀಜಿಯವರ ದೇಹವನ್ನು ಸುಲಭವಾಗಿ ಕೊಂದಿರಬಹುದು. ಆದರೆ ಅವರ ಆದರ್ಶಗಳು, ತತ್ವ ಸಂದೇಶಗಳು ಹಾಗೂ ವಿಚಾರಧಾರೆಗಳನ್ನು ಯಾರಿಂದಲೂ ಎಂದಿಗೂ ಸಹ ಕೊಲ್ಲಲು ಸಾಧ್ಯವಿಲ್ಲ ಎಂದರು.

ಪ್ರಪಂಚದಲ್ಲಿ ಮಾನವೀಯತೆಯ ಮೌಲ್ಯ ಇರುವವರೆಗೂ ಹಾಗೂ ಗಾಂಧಿ ವಾದಿಗಳು ಬದು ಕಿರುವವರೆಗೂ ಮಹಾತ್ಮ ಗಾಂಧೀಜಿ ಯವರ ಹೆಸರು ಹಾಗೂ ವಿಚಾರಧಾರೆಗಳು ಉಳಿಯಲಿವೆ. ಸಾಮಾಜಿಕ ಜಾಲತಾಣಗಳಲ್ಲಿ ಮಹಾತ್ಮರ ಬಗ್ಗೆ ಅವಹೇಳನಾಕಾರಿ ಹಾಗೂ ಇಲ್ಲಸಲ್ಲದ ಮಾತುಗಳ ನಾಡುವ ಕೆಲ ಮಂದಿ ಇದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳುವಲ್ಲಿ ಸರ್ಕಾರ ಮುಂದಾಗಬೇಕೆಂದು ಮನವಿ ಮಾಡಿದರು.

ಗಾಂಧಿ ಭವನದ ಸಲಹೆಗಾರ ಪ್ರೊ.ಜಿ.ಬಿ. ಶಿವರಾಜು ಅವರು ಗಣ್ಯರು ಹಾಗೂ ಶಿಬಿರಾರ್ಥಿ ಗಳನ್ನು ಸ್ವಾಗತಿಸಿ ಅಭಿನಂದಿಸಿದರು. 6 ಜಿಲ್ಲೆಯ 160ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿರುವುದು ವಿಶೇಷ ಸಂಗತಿ ಎಂದರು.

ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಕೆ. ಚಂದ್ರು, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ರಾದ ಪುಟ್ಟರಾಜು, ಎಂ.ಆರ್.ವಾಸು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಹರೀಶ್, ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಸತೀಶ್, ಇಸಿಓ ಅನಿಲ್ ಕುಮಾರ್, ದಿಡಗ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಡಿ.ಆರ್.ಮಂಜುನಾಥ್, ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ನೀಲಿಸಿದ್ದು, ಪಿಡಿಓ ಕೆ.ಎಸ್.ಪ್ರಕಾಶ್, ಮಾಜಿ ಸದಸ್ಯರಾದ ಜ್ಯೋತಿಶ್, ಸೌಮ್ಯ ಗವಿಶ್, ಪ್ರಮುಖರಾದ ಯೋಗೇಶ್, ದಿನೇಶ್, ಉಮೇಶ್ ಬಳಗಾರ ಹಾಗೂ ಶಿಬಿರಾರ್ಥಿಗಳು ಹಾಜರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK